ವಿಜಯಪುರ | ಸಂಪುಟ 01 | ಸಂಚಿಕೆ 264 | ಪುಟ 4 | ₹ 3.00
https://udayarashminews.com
udayarashmi 7026028778

# ಉದಯ ರಶ್ಮಿ


ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com | Title Code: KARKAN28047 | ಗುರುವಾರ ಡಿಸೆಂಬರ್ 14, 2023

“ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯ ಧೀರಜ ಸಾಹು ಮನೆಯಲ್ಲಿ ರೂ.300 ಕೋಟಿಗೂ ಅಧಿಕ ನಗದು ಪತ್ತೆಯಾಗಿದೆ. ಇದರಿಂದ ಕಾಂಗ್ರೆಸ್ ಪ್ರಜಾಪ್ರಭುತ್ವ ವಿರೋಧಿ, ಲೂಟಿ-ಕೋರ, ಲಂಚಕೋರ ಎಂಬುದು ಸಾಬೀತಾಗಿದೆ. ಅದರ ಸಾಚಾತನ ಬಟಾಬಯಲಾಗಿದೆ



– ಆರ್.ಎಸ್.ಪಾಟೀಲ ಕೂಚಬಾಳ
ಬಿಜೆಪಿ ವಿಜಯಪುರ ಜಿಲ್ಲಾಧ್ಯಕ್ಷರು

### ಅಶ್ರುವಾಯು ಸಿಡಿಸುತ್ತಾ ಗ್ಯಾಲರಿಯಿಂದ ನುಗ್ಗಿದ ಈರ್ವರು । ಆರು ಆರೋಪಿಗಳ ಬಂಧನ । 3 ತಿಂಗಳ ತಯಾರಿ!

# ನೂತನ ಸಂಸತ್ ಭವನದಲ್ಲಿ ಭಾರೀ ಭದ್ರತಾ ಲೋಪ!

ನವದೆಹಲಿ: ಇಬ್ಬರು ಆಗಂತುಕರು ಸಂಸತ್ತಿನ ಸಂದರ್ಶಕರ ಗ್ಯಾಲರಿಯಿಂದ ಲೋಕಸಭೆಯ ಸದಸ್ಯರ ಪೀಠಕ್ಕೆ ಜಿಗಿದು ಹಳದಿ ಬಣ್ಣದ ಅಶ್ರುವಾಯು ಸಿಡಿಸುತ್ತಾ ಓಡಾಡಿದ ಘಟನೆ ಬುಧವಾರ ಲೋಕಸಭೆಯಲ್ಲಿ ನಡೆದಿದ್ದು ಭಾರೀ ಭದ್ರತಾ ಲೋಪವುಂಟಾದ ಪ್ರಸಂಗ ನಡೆದಿದೆ.



ಇದರಿಂದ ಗೊಂದಲದ ವಾತಾವರಣ ಉಂಟಾಗಿ ಸದನವನ್ನು ಮಧ್ಯಾಹ್ನ 2 ಗಂಟೆಯವರೆಗೆ ಮುಂದೂಡಲಾಯಿತು.

ಸಂದರ್ಶಕ ಗ್ಯಾಲರಿಯಿಂದ ಲೋಕಸಭೆಯ ಚೇಂಬರ್‌ಗೆ ಜಿಗಿದು ಬೆಂಚುಗಳ ಮೇಲೆ ಘೋಷಣೆ ಕೂಗುತ್ತಾ ಇಬ್ಬರು ಹಾರುತ್ತಿರುವುದು ಕಂಡುಬಂದಿತು.

ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಹೇಳುವಂತೆ ಇಬ್ಬರು ಸಾರ್ವಜನಿಕ ಗ್ಯಾಲ-ರಿಯಿಂದ ಜಿಗಿದಿದ್ದಾರೆ. ಶೂನ್ಯ ವೇಳೆಯಲ್ಲಿ ಒಬ್ಬರು ಅಶ್ರುವಾಯು ಎರಚುತ್ತಾ ಸಾರ್ವಜನಿಕ ಗ್ಯಾಲ-ರಿಯಿಂದ ಜಿಗಿದರೆ ಮತ್ತೊಬ್ಬ ಲೋಕಸಭೆಯ ಬೆಂಚುಗಳ ಮೇಲೆ ಹಾರುತ್ತಿರುವುದು ಕಂಡುಬಂದಿದೆ ಎಂದು ಚೌಧರಿ ಹೇಳಿದರು.

ಕೂಡಲೇ ಇಬ್ಬರು ವ್ಯಕ್ತಿಗಳನ್ನು ಅಲ್ಲಿದ್ದ ಲೋಕಸಭಾ ಸದಸ್ಯರು ಮತ್ತು ಸಿಬ್ಬಂದಿ ನಿಯಂತ್ರಿಸಲು ಹೋಗಿ ತಳ್ಳಾಟ ನಡೆದಿದೆ.

ಇದು ಭದ್ರತಾ ಉಲ್ಲಂಘನೆಯಾಗಿದೆ. ಇಂದು 2001 ರಲ್ಲಿ ನಡೆದ ಸಂಸತ್ತಿನ ದಾಳಿಯ 22ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಈ ಘಟನೆ ನಡೆದಿರುವುದು ದುರದೃಷ್ಟಕರ.

ಘಟನೆಗೆ ಸಂಬಂಧಿಸಿದಂತೆ ಸದನದೊಳಗೆ ನುಗ್ಗಿ ದಾಂಧಲೆ ನಡೆಸಿದ ಇಬ್ಬರು ಹಾಗೂ ಹಳದಿ ಬಣ್ಣದ ಹೊಗೆಯನ್ನು ಹೊರಸೂಸುವ ಕ್ಯಾನ್‌ಗಳನ್ನು ಹೊತ್ತು ಸಂಸತ್ ಭವನದ ಹೊರಗೆ ಪ್ರತಿಭಟನೆ ನಡೆಸುತ್ತಿದ್ದ ಮಹಿಳೆ ಸೇರಿ ಮತ್ತೊಬ್ಬ ಯುವಕ ಸೇರಿದಂತೆ ನಾಲ್ವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಸಂಸತ್ತಿನ ಒಳಗೆ ನುಗ್ಗಿದ ಒಬ್ಬಾತನನ್ನು ಸಾಗರ್ ಶರ್ಮಾ ಹಾಗೂ ಹೊರಗೆ ಪ್ರತಿಭಟನೆ ನಡೆಸುತ್ತಿದ್ದ ಇಬ್ಬರಲ್ಲಿ ಒಬ್ಬ ಮಹಿಳೆ ನೀಲಂ (42) ಮತ್ತು ಅಮೋಲ್ ಶಿಂಧೆ (25) ಎಂದು ಗುರುತಿಸಲಾಗಿದೆ.

## 2001ರಲ್ಲಿ ಇದೇ ದಿನ ಸಂಸತ್ತಿನ ಮೇಲೆ ದಾಳಿ

ಪಾಕಿಸ್ತಾನ ಮೂಲದ ಲಷ್ಕರ್-ಎ-ತೊಯ್ಬಾ ಮತ್ತು ಜೈಶ್-ಎ-ಮೊಹಮ್ಮದ್ ಸಂಘಟನೆಗಳ ಭಯೋತ್ಪಾದಕರು 2001 ರಲ್ಲಿ ಇದೇ ದಿನ ಸಂಸತ್ತಿನ ಮೇಲೆ ದಾಳಿ ಮಾಡಿ ಒಂಬತ್ತು ಜನರನ್ನು ಕೊಂದು ಹಾಕಿದ್ದರು.

## ಆರು ಆರೋಪಿಗಳನ್ನು ಬಂಧಿಸಿದ ಪೊಲೀಸರು



ಲೋಕಸಭೆಯಲ್ಲಿ ಪ್ರಮುಖ ಭದ್ರತಾ ಲೋಪ ನಡೆದ ಪ್ರಕರಣಕ್ಕೆ ಒಟ್ಟು ಆರು ಆರೋಪಿಗಳನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಈ ಪ್ರಕರಣ ಸಂಬಂಧ ಮೊದಲು ನಾಲ್ವರನ್ನು ಪೊಲೀಸರು ಬಂಧಿಸಿದ್ದರು. ದೆಹಲಿ ಪೊಲೀಸರು ಪುರುಷ ಮತ್ತು ಮಹಿಳೆ ಇಬ್ಬರನ್ನೂ ಸಂಸತ್ ಭವನದ ಮುಂದೆ ಬಂಧಿಸಿದ್ದರೆ, ಮತ್ತಿಬ್ಬರು ಸಂಸತ್ತಿನ ಒಳಗೆ ಬಂಧಿಸಲಾಗಿದೆ ಎಂದು ಡೆಪ್ಯುಟಿ ಕಮಿಷನರ್ ಆಫ್ ಪೊಲೀಸ್ (ನವದೆಹಲಿ) ಪ್ರಣವ್ ತಾಯಲ್ ಖಚಿತಪಡಿಸಿದ್ದಾರೆ.

ಸಂಸತ್ತಿನ ಹೊರಗೆ ಬಂಧಿಸಿದವರನ್ನು ಸಂಸತ್ ಸ್ಟ್ರೀಟ್ ಪೊಲೀಸ್ ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಿದ್ದು ಅವರು ಹರಿಯಾಣದ ಹಿಸಾರ್ ನಿವಾಸಿ ನೀಲಂ (42) ಮತ್ತು ಮಹಾರಾಷ್ಟ್ರದ ಲಾತೂರ್ ನಿವಾಸಿ ಅಮೋಲ್ ಶಿಂಧೆ (25) ಎಂದು ಗುರುತಿಸಲಾಗಿದೆ. ಮತ್ತಿಬ್ಬರನ್ನು ಉತ್ತರ ಪ್ರದೇಶದ ಸಾಗರ್ ಶರ್ಮಾ ಮತ್ತು ಮೈಸೂರಿನ ಮನೋರಂಜನ್ ಎಂದು ತಿಳಿದುಬಂದಿದೆ.

ಇನ್ನು ವಿಕ್ಕಿ ಶರ್ಮಾ ಮತ್ತು ಆತನ ಪತ್ನಿಯನ್ನು ಹರಿಯಾಣದ ಹಿಸ್ಸಾರ್ ನಲ್ಲಿ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ಗುರುಗ್ರಾಮದಲ್ಲಿ ತಂಗಿದ್ದು ಕಳೆದ ಮೂರು ತಿಂಗಳಿನಿಂದ ತಯಾರಿ ನಡೆಸಿದ್ದರು ಎಂದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿದೆ.

# ಭ್ರಷ್ಟ ಸಂಸದರನ್ನು ಬಂಧಿಸಲು ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ವಿಜಯಪುರ: ಒಡಿಶಾದ ಕಾಂಗ್ರೆಸ್ ಸಂಸದ ಧೀರಜ ಸಾಹು ಅವರ ಮನೆಯಲ್ಲಿ ರೂ. 300 ಕೋಟಿಗೂ ಅಧಿಕ ನಗದು ಹಣ ಪತ್ತೆಯಾಗಿದ್ದು, ಕೂಡಲೇ ಭ್ರಷ್ಟ ಸಂಸದರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಬಿಜೆಪಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.




ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದ ಎದುರು ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಎಸ್. ಪಾಟೀಲ ಕೂಚಬಾಳ, ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯ ಧೀರಜ ಸಾಹು ಅವರ ಮನೆಯಲ್ಲಿ ಕೋಟ್ಯಂತರ ನಗದು ಪತ್ತೆಯಾಗಿದೆ. ಇದರಿಂದಾಗಿ ಕಾಂಗ್ರೆಸ್ ಪ್ರಜಾಪ್ರಭುತ್ವ ವಿರೋಧಿ, ಲೂಟಿ-ಕೋರ, ಲಂಚಕೋರ ಎಂಬುವುದು ಸಾಬೀತಾಗಿದೆ. ಬೆಂಗಳೂರಿನಲ್ಲಿ ಗುತ್ತಿಗೆದಾರರ ಬಳಿ ರೂ. 40 ಕೋ. ರೂ. 80 ಕೋ. ಹಣ ಸಿಕ್ಕಿತ್ತು. ಈಗ ಕಾಂಗ್ರೆಸ್ ಸಂಸದನ ಮನೆಯಲ್ಲಿ ರೂ. 300 ಕೋಟಿಗೂ ಅಧಿಕ ನಗದು ಸಿಕ್ಕಿದೆ. ಇದರಿಂದ ಕಾಂಗ್ರೆಸಲ್ಲಿನ ಸಾಚಾತನ ಬಟಾಬಯಲಾಗಿದೆ. ಸಂಸದ ಧೀರಜ ಸಾಹು ರಾಜೀನಾಮೆ ನೀಡಬೇಕು. ತಕ್ಷಣ ಅವರನ್ನು ಐಟಿ ಅಧಿಕಾರಿಗಳು ಬಂಧಿಸಿ ಕ್ರಮ ಕೈಗೊಳ್ಳಬೇಕು. ನೈತಿ-ಕತೆ ಇದ್ದರೆ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್. ಕೆ. ಬೆಳ್ಳುಬ್ಬಿ, ಕಾಸುಗೌಡ ಬಿರಾದಾರ, ಶಿವರುದ್ರ ಬಾಗಲಕೋಟ, ಮಲ್ಲಿಕಾರ್ಜುನ ಜೋಗೂರ, ಮಲ್ಲನಗೌಡ ಪಾಟೀಲ, ಪ್ರೇಮಾನಂದ ಬಿರಾದಾರ, ಶಿಲ್ಪ ಕುದರಗೊಂಡ, ವಿಠ್ಠಲ ಹೊಸಪೇಟ, ಚಿದಾನಂದ ಛಲವಾದಿ, ಕೃಷ್ಣಾ ಗುನ್ನಾಳಕರ, ಪಾಪುಸಿಂಗ ರಜಪೂತ, ರಾಹುಲ ಜಾಧಾವ, ಬಾಬು ರಾಜೇಂದ್ರ ನಾಯಕ, ರಾಜು ಮಗಿಮಠ, ಮಹೇಶ ಒಡೆಯರ ಮುಂತಾದವರು ಉಪಸ್ಥಿತರಿದ್ದರು.

## ರಾಜ ನುಡಿ

ಸಕ್ಕರೆ ಹಾಕಿ ಕರಗಿಸಿದರೆ ನೀರು ಸಿಹಿಯಾಗುತ್ತದೆ ನಿಜಾ ಆದರೆ ಸಿಹಿಯಾಗಿಸಿದ ಸಕ್ಕರೆ ಕಾಣದಂತೆ ಕಣ್ಮರೆಯಾಗಿರುತ್ತದೆ. ಸಕ್ಕರೆಯಂತ ಬಂಧುಗಳು ಬದುಕಲ್ಲಿ ಬಂದರೆ ಅದೃಷ್ಟ ಇಲ್ಲದಿದ್ದರೆ ನಾವೇ ಅಂತವರಾಗೋಣ. ನಮ್ಮೊಂದಿಗೆ ಬೆರೆತವರ ಬದುಕಾದರೂ ಸಿಹಿಯಾಗಲಿ.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 254

ಲಿಂಗವನರಿಯದೆ ಏನನ-ರಿದಡೆಯೂ ಫಲವಿಲ್ಲ.

*ಲಿಂಗವನರಿಯದೆ ಏನನರಿದಡೆಯೂ ಫಲವಿಲ್ಲ.*
*ಲಿಂಗವನರಿದ ಬಳಿಕ ಮತ್ತೇನನರಿದಡೆಯೂ ಫಲವಿಲ್ಲ.*
*ಸರ್ವಕಾರಣ ಲಿಂಗವೆಂದುದಾಗಿ ಲಿಂಗವನೆ ಅರಿದೆ,*
*ಅರಿದರಿದು ಲಿಂಗಸಂಗವನೆ ಮಾಡುವೆ*
*ಸಂಗಸುಖದೊಳಗೋಲಾಡುವೆ ಗುಹೇಶ್ವರಾ,*
*– ಅಲ್ಲಮಪ್ರಭುಗಳು*

ಇಲ್ಲಿಅಲ್ಲಮರು ಹೇಳುವಂತೆ ಲಿಂಗವನ-ರಿಯದೆ ನಾವು ಜಗತ್ತಿನ ಎಲ್ಲ ಜ್ಞಾನಪಡೆದರು ಅದು ಅಪೂರ್ಣ, ಕಾರಣವೇನೆಂದರೆ ಯಾರೆ ಆಗಲಿ (ವಿಜ್ಞಾನಿ, ತತ್ವಜ್ಞಾನಿ) ಪರಿಪೂರ್ಣ ಜ್ಞಾನ ಪಡೆಯಬೇಕಾದರೆ ಲಿಂಗ(ಜಗದ ಚಾಲನಾ ಶಕ್ತಿ)ವನ್ನು ಅರಿಯಬೇಕು, ಎಕೆಂದರೆ ಲಿಂಗದಲ್ಲಿ ಎಲ್ಲವೂ ಅಡಗಿದೆ. (ಲಿಂಗಮಧ್ಯೆ ಜಗತ್ ಸರ್ವಂ) ಅಂತಹ ಅಮೂಲ್ಯ ನಿಧಿಯ ಪ್ರತೀಕವಾದ ಇಷ್ಟಲಿಂಗವನ್ನು ನಾವೆಲ್ಲರೂ ಕೊರಳಲ್ಲಿ ಧರಿಸಿದ್ದರೂ ಅದರ ಬೆಲೆಯನ್ನು ಅರಿಯದವರಾಗಿದ್ದೇವೆ, ಲಿಂಗವನರಿದ ಬಳಿಕ ಮತ್ತೇನರಿದಡೆಯೂ ಫಲವಿಲ್ಲ. ಅದರ ಅವಶ್ಯಕತೆಯು ಬರುವುದಿಲ್ಲ. ಅಲ್ಲಮರು ಸರ್ವಕಾರಣ ಲಿಂಗವೆಂದುದಾಗಿ ಲಿಂಗವನೆ ಅರಿದೆ, ಅರಿದರಿದು ಲಿಂಗಸಂಗವನೆ ಮಾಡುವೆ ಸಂಗಸುಖದೊಳಗೋಲಾಡುವೆ ಎಂದಿರುವುದು. ಲಿಂಗದ ಅರಿವು ಮಾತ್ರ ಶಾಶ್ವತ, ಆ ಶಾಶ್ವತ ಸತ್ಯವನ್ನು ಸಂಪಾದಿಸೋಣ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಉತ್ತರ ಕರ್ನಾಟಕವನ್ನು ಸರ್ಕಾರ ಕಡೆಗಣಿಸಿದೆ :ಕುಲಕರ್ಣಿ

ಉದಯರಶ್ಮಿ ನ್ಯೂಸ್

ಆಲಮಟ್ಟಿ: ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಸ್ಪಂದಿಸಲು ಬೆಳಗಾವಿಯಲ್ಲಿ ಸುವರ್ಣ ಸೌಧ ನಿರ್ಮಿಸಿ ಸರ್ಕಾರ ಅಧಿವೇಶನ ನಡೆಸುತ್ತಿದೆ. ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಯಾವ ಶಾಸಕರೂ ಚಕಾರ ಎತ್ತುತ್ತಿಲ್ಲ. ಸರ್ಕಾರವು ಕೂಡಾ ಉತ್ತರ ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಿದೆ. ಕೇವಲ ಕಾಟಾಚಾರಕ್ಕೆ ಅಧಿವೇಶನ ನಡೆಸುವುದಾದರೂ ಏತಕ್ಕೆ ಎಂದು ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರದಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಹೇಳಿದರು.

ಬುಧವಾರ ಆಲಮಟ್ಟಿಯ ಪ್ರವಾಸಿ ಮಂದಿರದ ಆವರಣದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬರದ ನಾಡು ಖ್ಯಾತಿಯ ಉತ್ತರಕರ್ನಾಟಕವನ್ನು ಹಸಿರು ನಾಡಾಗಿಸಲು ಆಲಮಟ್ಟಿ ಜಲಾಶಯಕ್ಕೆ ನಿರ್ಮಿಸಲು ಭೂಮಿ



ಪೂಜೆ ನೆರವೇರಿಸಿ 60ವರ್ಷ ಕಳೆಯುತ್ತಾ ಬಂದರೂ ಇನ್ನೂವರೆಗೆ ಬರದ ನಾಡು ಖ್ಯಾತಿಯ ಜಿಲ್ಲೆಗಳಲ್ಲಿ ಇನ್ನೂವರೆಗೆ ಸಮರ್ಪಕವಾಗಿ ನೀರಾವರಿಯಾಗದೇ ಇರುವದು ಜನರಿಂದ ಚುನಾಯಿತರಾಗಿರುವ ಶಾಸಕರು, ಸಂಸದರುಗಳ ದಿವ್ಯ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದು ಖಾರವಾಗಿ ಮಾತನಾಡಿದರು.

ರಾಜ್ಯದ ಶೇ.65ರಷ್ಟು ಕೃಷಿ ಜಮೀನನ್ನು ನೀರಾವರಿಗೊಳಪಡಿಸುವ ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು ಮೌನವಾಗದೇ ಪ್ರಗತಿಯ ಬಗ್ಗೆ ಮೌನ ಮುರಿದು ಮಾತನಾಡಿರಿ ವಿಧಾನ ಸಭೆ, ವಿದಾನಪರಿಷತ್ ಸದಸ್ಯರುಗಳೇ ಎಂದು ನುಡಿದರು.

ಕೋಟ್ಯಾಂತರ ಹಣ ಖರ್ಚು ಮಾಡಿ ಅಧಿವೇಶನದಲ್ಲಿ ರೈತರ ಹಾಗೂ ಜನಸಾಮಾನ್ಯರ ಗಂಭೀರ ಸಮಸ್ಯೆಯನ್ನು ಚರ್ಚಿಸದೆ ಸರ್ಕಾರ ತವಡು ಕುಟ್ಟುವ ಕೆಲಸ ಮಾಡುತ್ತಿದೆ ಎಂದು ಸರ್ಕಾರದ ವಿರುದ್ಧ ಹರಿ ಹಾಯ್ದರು.

ವಿಜಯಪುರ ಜಿಲ್ಲೆ ಬರಗಾಲ ಜಿಲ್ಲೆ ಎಂಬ ಕುಖ್ಯಾತಿಗೆ ಪ್ರಸಿದ್ಧವಾಗಿದೆ. ಯು.ಕೆ.ಪಿ ಯೋಜನೆಗಳು ಸಂಪೂರ್ಣ ಅನುಷ್ಠಾನಗೊಂಡರೆ ಮಾತ್ರ ಅವಳಿ ಜಿಲ್ಲೆಯ ರೈತರ

ಬದುಕು ಬಂಗಾರವಾಗಲು ಸಾಧ್ಯ ಈ ಯೋಜನೆಗಳ ಅನುಷ್ಠಾನಕ್ಕೆ ಸರ್ಕಾರ ಆದ್ಯತೆ ನೀಡಬೇಕಿತ್ತು ಆದ-’ರೆ ಅಧಿವೇಶನ ಮುಕ್ತಾಯ ಹಂತಕ್ಕೆ ಬಂದರೂ ಅಧಿವೇಶನದಲ್ಲಿ ಚರ್ಚೆಗೆ ಬರದೇ ಇರುವದು ಜಿಲ್ಲೆಯ ರೈತರ ದುರ್ದೈವ ಮತ್ತು ಜಿಲ್ಲೆಯ ಮೂವರು ಸಚಿವರ ಹಾಗೂ ಅವಳಿ ಜಿಲ್ಲೆಯ ಶಾಸಕರ ನಿರ್ಲಕ್ಷವೇ ಮುಖ್ಯ ಕಾರಣ ಎಂದು ಅರವಿಂದ ಕುಲಕರ್ಣಿ ಆಕ್ರೋಶ ವ್ಯಕ್ತಪಡಿಸಿದರು.

ಜಲಾಶಯದ ನೀರಿನ ಮಟ್ಟವನ್ನು 524.256 ಕ್ಕೆ ನಿಲ್ಲಿಸಲು ನ್ಯಾಯಮೂರ್ತಿ ಬೃಜೇಶಕುಮಾರ ಅವರ ನೇತೃತ್ವದ 2ನೇ ಅಂತರರಾಜ್ಯ ಕೃಷ್ಣಾ ಜಲ ವಿವಾದ ನ್ಯಾಯಾಧೀಕರಣವು 2010 ಐತೀರ್ಪು ನೀಡಿದ್ದು, 2013ರಲ್ಲಿ ಅಂತಿ ತೀರ್ಪು ಪ್ರಕಟಿಸಿದೆ. 2013 ರಿಂದ 2018ರವರೆಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸ್ವಲ್ಪ ಸಮಾಧಾನ ಎಂಬಂತೆ ಕಾಲುವೆಗಳ ನಿರ್ಮಾಣ ಮಾಡಲಾಯಿತು. ಯೋಜನೆ ಆರಂಭವಾಗಿ 60 ವರ್ಷಗಳು ಆಗುತ್ತಾ ಬಂದರು ಮೂಲ ಆಶೆ ಈಡೇರುತ್ತಿಲ್ಲ, ಈಗಲಾದರೂ ನಡೆದಿರುವ ಅಧಿವೇಶನದಲ್ಲಿ ಚರ್ಚಿಸಿ 524.256 ನೀರು ನಿಲ್ಲಿಸಲು ತಗಲುವ ಅನುದಾನವನ್ನು ಬಿಡುಗಡೆ ಮಾಡಬೇಕು. ಸಿವ್ಹಿಲ್ ಕಾಮಗಾರಿ, ಪುನರ್ವಸತಿ, ಪುನರ್ ನಿರ್ಮಾಣ ಸೇರಿದಂತೆ ಅಗತ್ಯ ಕ್ರಮ ಕೈಗೊಂಡು ಯೋಜನೆಯನ್ನು ಪೂರ್ಣಗೊಳಿಸಬೇಕು, ಜಲಾಶಯದ ನೀರಿನ ಮಟ್ಟ ಹೆಚ್ಚಿಸುವದರಿಂದ ಇನ್ನು 1 ಲಕ್ಷ ಎಕರೆಗಿಂತಲೂ ಹೆಚ್ಚು ಜಮೀನು ಮುಳುಗಡೆ ಹೊಂದುತ್ತವೆ. ಸುಮಾರು 22ಹಳ್ಳಿಗಳು ಮುಳುಗಡೆ ಹೊಂದುತ್ತಿವೆ, ಇನ್ನುಳಿದಂತೆ ಈ ಹಿಂದೆ ಮುಳುಗಡೆ ಹೊಂದಿರುವ ಗ್ರಾಮಗಳ ಜಮೀನುಗಳು ಬಾಧಿತಗೊಳ್ಳುತ್ತವೆ. ಈ ಭಾಗದ ರೈತರು ಗುಳೆ ಹೋಗುವದನ್ನು ತಪ್ಪಿಸಲು ಸರ್ಕಾರ ಅಗತ್ಯಕ್ರಮಕೈಗೊಂಡು ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸದಾಶಿವ ಬರಟಗಿ, ಹೊನಕೇರಪ್ಪ ತೆಲಗಿ, ಗುರಲಿಂಗಪ್ಪ ಪಡಸಲಗಿ, ಬಸಯ್ಯ ಮಠ, ಈರಣ್ಣ ದೇವರಗುಡಿ, ಮೋಹನಗೌಡ ಪಾಟೀಲ, ಹನಮಂತ್ರಾಯ ಗುಣಕಿ ಮೊದಲಾದವರಿದ್ದರು.

### ಅತಿಥಿ ಉಪನ್ಯಾಸಕರ ಮುಷ್ಕರದಿಂದಾಗಿ ತರಗತಿಗಳು ನಡೆಯುತ್ತಿಲ್ಲವೆಂದು ಆರೋಪಿಸಿ ಬೃಹತ್ ಪ್ರತಿಭಟನೆ

# ಇಂಡಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಂದ ಪ್ರತಿಭಟನೆ

ಉದಯರಶ್ಮಿ ನ್ಯೂಸ್

ಇಂಡಿ: ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸಂಘಟನೆಯ ಪದಾಧಿಕಾರಿಗಳೊಂದಿಗೆ ಕಳೆದ 22 ದಿನಗಳಿಂದ ಅತಿಥಿ ಉಪನ್ಯಾಸಕರ ಮುಷ್ಕರದಿಂದಾಗಿ ತರಗತಿಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಆರೋಪಿಸಿ ಬೃಹತ್ ಪ್ರತಿಭಟನೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದಿಂದ ಮಿನಿ ವಿಧಾನಸೌಧದ ವರೆಗೆ ಪಾದಯಾತ್ರ ಮೂಲಕ ತೆರಳಿ ಇಂಡಿ ಉಪವಿಭಾಗಾಧಿಕಾರಿ ಅಬಿದ ಗದ್ಯಾಳ ಅವರಿಗೆ ಮನವಿ ಸಲ್ಲಿಸಿದರು.

ನಂತರ ಎಬಿವಿಪಿ ನಗರ ಉಪಾಧ್ಯಕ್ಷ ಬಿ.ಎಚ್.ಬಗಲಿ ಮಾತನಾಡಿ, “ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಿಂದ ಅದರಲ್ಲೂ ಬಡಕುಟುಂಬದಿಂದ ಶಿಕ್ಷಣ ಕಲಿಯಲು ಬರುತ್ತಿದ್ದು, ಅವರಿಗೆ ಸರಿಯಾಗಿ ಪಾಠ ನಡೆಯುತ್ತಿಲ್ಲ ಇದರಿಂದ ಶೈಕ್ಷಣಿಕ ತೊಂದರೆಯಾಗುತ್ತಿದೆ, ಆದಷ್ಟು ಬೇಗ ಸರ್ಕಾರ ಅತಿಥಿ ಉಪನ್ಯಾಸಕರ ಸಮಸ್ಯೆ ಬಗೆಹರಿಸಿ ತರಗತಿಗಳು ನಡೆಯುವಂತೆ ಆಗಬೇಕು ತನ್ನ ಹಠಮಾರಿ ಧೋರಣೆ ಬಿಟ್ಟು ಅತಿಥಿ ಉಪನ್ಯಾಸಕರಿಗೆ ನ್ಯಾಯ ಒದಗಿಸಬೇಕು ಎಂದರು.

ವಿದ್ಯಾರ್ಥಿನಿ ಪೂಜಾ ಸಾರವಾಡ ಮಾತನಾಡಿ ನಿತ್ಯ ಒಂದು ತರಗತಿ ನಡೆಯುವದರಿಂದ ನಾವು ಕಾಲೇ-ಜಿಗೆ ಬಂದರು ಪೂರ್ಣ ಪ್ರಮಾಣದ ಶಿಕ್ಷಣದಿಂದ ವಂಚಿತರಾಗುತ್ತಿದ್ದೇವೆ, ಅದರಲ್ಲೂ ವಿದ್ಯಾರ್ಥಿನಿಯರು ಸಾಕಷ್ಟು ತೊಂದರೆಗಳನ್ನು ಅನುಭವಿಸಿ ಕಾಲೇ-ಜಿಗೆ ಬರುತ್ತಿದ್ದೇವೆ. ಸರ್ಕಾರವು ನಮ್ಮ



ಬೇಡಿಕೆಯಾದ ಪೂರ್ಣ ಪ್ರಮಾಣದಲ್ಲಿ ತರಗತಿಗಳು ನಡೆಯಬೇಕಾದರೆ ಅತಿಥಿ ಉಪನ್ಯಾಸಕರ ಸಮಸ್ಯೆಯನ್ನು ಶೀಘ್ರ ಬಗೆಹರಿಸಿ ನಮಗೆ ನ್ಯಾಯ ಒದಗಿಸಬೇಕು ಎಂದರು.

ಮನವಿ ಸ್ವೀಕರಿಸಿ ಮಾತನಾಡಿದ ಇಂಡಿ ಉಪವಿಭಾಗಾಧಿಕಾರಿ ಅಬಿದ ಗದ್ಯಾಳ “ ಈ ವಿಷಯವನ್ನು ಸರಕಾರದ ಗಮನಕ್ಕೆ ತರುವೆ ಹಾಗೂ ಕಾಲೇಜಿನ ಇತರ ಸಮಸ್ಯೆಗಳಿಗೆ ಕಾಲೇಜಿಗೆ ಭೇಟಿ ನೀಡಿ ಸಮಸ್ಯೆ ಪರಿಹರಿಸುವೆ” ಎಂದರು.

ಎಬಿವಿಪಿ ಪ್ರಮುಖರಾದ ಸಚಿನ ಧನಗೊಂಡ, ಈರಣ್ಣ ಸಿಂದಗಿ, ಚಂದ್ರಕಾಂತ, ವಿಶಾಲ, ಅಭಿಶೇಖ, ಆಕಾಶ ಪಾಟೀಲ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

## ವೃಕ್ಷಥಾನ್ ಹೆರಿಟೇಜ್ ರನ್– 2023 ಪೂರ್ವ ಸಿದ್ಧತೆಗಳ ಕುರಿತ ಕೋರ್ ಕಮೀಟಿ ಸಭೆ

# ಹೆರಿಟೇಜ್ ರನ್‌ಗೆ ಭಾರಿ ಬೆಂಬಲ ವ್ಯಕ್ತ :ಡಾ.ಮಹಾಂತೇಶ

**ಉದಯರಶ್ಮಿ ನ್ಯೂಸ್**



ವಿಜಯಪುರ: ಡಿ.24 ರಂದು ನಗರದಲ್ಲಿ ನಡೆಯಲಿರುವ ವೃಕ್ಷಥಾನ್ ಹೆರಿಟೇಜ್ ರನ್– 2023ಕ್ಕೆ ತಾಂತ್ರಿಕ ಸಿದ್ದತೆಗಳನ್ನು ಕೈಗೊಳ್ಳಲಾಗಿದ್ದು, 5 ಕಿ.ಮೀ, 10 ಕಿ.ಮೀ ಮತ್ತು 21 ಕಿ.ಮೀ ಓಟದಲ್ಲಿ ಪಾಲ್ಗೊಂಡ ಕ್ರೀಡಾಪಟುಗಳ ಓಟದ ಭಾವಚಿತ್ರಗಳು ನೇರವಾಗಿ ಅವರ ಇ–ಮೇಲ್‌ಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಇಂದು ಬುಧವಾರ ನಗರದಲ್ಲಿ ವೃಕ್ಷಥಾನ್ ಹೆರಿಟೇಜ್ ರನ್– 2023 ಪೂರ್ವ ಸಿದ್ಧತೆಗಳ ಕುರಿತು ನಡೆದ ಕೋರ್ ಕಮೀಟಿ ಸಭೆಯಲ್ಲಿ ಅವರು ಮಾತನಾಡಿದರು.

ಈ ಓಟದಲ್ಲಿ ಪಾಲ್ಗೊಳ್ಳುತ್ತಿರುವ ಫೇಸರ್, ಅಂಬಾಸೀಡರ್ ಮತ್ತು ಪ್ರಮುಖ ಕ್ರೀಡಾಪಟುಗಳು ಈ ಬಾರಿಯ ಕಾರ್ಯಕ್ರಮಕ್ಕೆ ಹೆಚ್ಚಿನ ಮೆರಗು ನೀಡುತ್ತಿದ್ದಾರೆ. ಅಲ್ಲದೇ, ಕ್ರೀಡಾಪಟುಗಳು ಓಡುವ ಮಾರ್ಗದಲ್ಲಿ ಅಲ್ಲಲ್ಲಿ ನಾನಾ ಸಾಂಸ್ಕೃತಿಕ ಕಲಾ ತಂಡಗಳು ತಮ್ಮ ಸಂಗೀತ ಮತ್ತು ನೃತ್ಯ ಪ್ರದರ್ಶನ ಮೂಲಕ ಓಟಗಾರರಿಗೆ ಪ್ರೋತ್ಸಾಹ ನೀಡಲಿದ್ದಾರೆ. ಕೋರ್ ಕಮೀಟಿಯ ಎಲ್ಲ ಪದಾಧಿಕಾರಿಗಳು ಮತ್ತು ಜಿಲ್ಲಾಡಳಿತದ ಸಹಕಾರದಿಂದ ಹೆರಿಟೇಜ್ ರನ್‌ಗೆ ಭಾರಿ ಬೆಂಬಲ ವ್ಯಕ್ತವಾಗುತ್ತಿದೆ. ಈ ಭಾರಿಯ ಕಾರ್ಯಕ್ರಮ ರಾಜ್ಯವಷ್ಟೇ ಅಲ, ದೇಶಾದ್ಯಂತ ಗಮನ ಸೆಳೆಯುತ್ತಿದ್ದು ಸಂಪೂರ್ಣ ಯಶಸ್ವಿಯಾಗಲಿದೆ ಎಂದು ಹೇಳಿದರು.

ಈ ಸಭೆಯಲ್ಲಿ ಖ್ಯಾತ ಓಟಗಾರರಾದ ರಾಜಿಂದರ್ ಕೌರ್, ಶೋಭಾ ನರೇಂದ್ರಕುಮಾರ ನಾಗಶೆಟ್ಟಿ ಕೂಡ ಪಾಲ್ಗೊಂಡು ಸಿದ್ಧತೆ ಪರಿಶೀಲನೆ ಜೊತೆಗೆ ಸಲಹೆ ಸೂಚನೆಗಳನ್ನು ಆಲಿಸಿದರು.

ಸಿ.ಆರ್.ಡಿ.ಎಸ್ ಪೌಂಡೇಶನ್ ಸಂಸ್ಥಾಪಕ ನಿರ್ದೇಶಕಿಯೂ ಆಗಿರುವ ಶೋಭಾ ನರೇಂದ್ರಕುಮಾರ ನಾಗಶೆಟ್ಟಿ ಮಾತನಾಡಿ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಓಟಗಾರರು ಈ ವೃಕ್ಷಥಾನ್ ಹೆರಿಟೇಜ್ ರನ್– 2023 ನಲ್ಲಿ ಪಾಲ್ಗೊಳ್ಳುತ್ತಿರುವುದು ಈ ಬಾರಿಯ ಕಾರ್ಯಕ್ರಮದ ಜನಪ್ರೀಯತೆಗೆ ಸಾಕ್ಷಿಯಾಗಿದೆ. ಇದರಿಂದ ಮುಂಬರುವ ದಿನಗಳಲ್ಲಿ ವಿಜಯಪುರ ಜಿಲ್ಲೆಯ ಜನತೆ ಮ್ಯಾರಾಥಾನ್‌ಗಳಲ್ಲಿ ಪಾಲ್ಗೊಳ್ಳಲು ಸ್ಫೂರ್ತಿಯಾಗಿದೆ ಎಂದು ಹೇಳಿದರು.

ಅಂತಾರಾಷ್ಟ್ರೀಯ ಖ್ಯಾತಿಯ ಅಲ್ಟ್ರಾ ಮ್ಯಾರಾಥಾನ್ ಕ್ರೀಡಾಪಟು 53 ವರ್ಷದ ರಾಜಿಂದರ್ ಕೌರ್ ಮಾತನಾಡಿ, ನಾನು ಈ ಮುಂಚೆ ದೇಶ ಮತ್ತು ವಿದೇಶಗಳಲ್ಲಿ ಹಲವಾರು ಓಟಗಳಲ್ಲಿ ಪಾಲ್ಗೊಂಡಿದ್ದೇನೆ. ಆದರೆ, ವೃಕ್ಷಥಾನ್ ಹೆರಿಟೇಜ್ ರನ್– 2023 ನಲ್ಲಿ ಪಾಲ್ಗೊಳ್ಳಲು ಸಾವಿರಾರು ಜನ ತಮ್ಮ ಹೆಸರುಗಳನ್ನು ನೋಂದಾಯಿಸಿರುವುದು ಅಚ್ಚರಿಯಷ್ಟೇ ಅಲ್ಲ, ಅತೀ ಹೆಚ್ಚು ಸಂತಸವನ್ನುಂಟು ಮಾಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ನೋಂದಣಿ ಸಮಿತಿ ಉಸ್ತುವಾರಿ ಡಾ. ಮಲ್ಲಿಕಾರ್ಜುನ ಯಲಗೊಂಡ ಮತ್ತು ವೀರೇಂದ್ರ ಗುಚ್ಚೆಟ್ಟಿ ಈವರೆಗೆ 7000ಕ್ಕೂ ಹೆಚ್ಚು ಜನ ತಮ್ಮ ಹೆಸರನ್ನು ನೋಂದಣಿ ಮಾಡಿಸಿಕೊಂಡಿದ್ದಾರೆ. ಈ ಸಂಖ್ಯೆ 8000 ದಾಟುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು.

ಖ್ಯಾತ ಉದ್ಯಮಿ ಚಂದ್ರಕಾಂತ ಶೆಟ್ಟಿ ಮಾತನಾಡಿ, ಕಾರ್ಯಕ್ರಮ ಆಯೋಜನೆ ಕುರಿತು ಕೈಗೊಳ್ಳಲಾದ ವ್ಯವಸ್ಥೆಗಳ ಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಚಾಲಕ ಮುರಗೇಶ ಪಟ್ಟಣಶೆಟ್ಟಿ, ಈಗಾಗಲೇ ವೃಕ್ಷಥಾನ್ ಹೆರಿಟೇಜ್ ರನ್– 2023 ಕುರಿತು ಶಾಲಾ ಕಾಲೇಜುಗಳು, ಸಂಘ ಸಂಸ್ಥೆಗಳಿಗೆ ತೆರಳಿ ಜಾಗೃತಿ ಮೂಡಿಸಲಾಗಿದೆ. ಇದಕ್ಕೆ ಪ್ರತಿಯಾಗಿ ಸಾವಿರಾರು ವಿದ್ಯಾರ್ಥಿಗಳು ಮತ್ತು ಯುವಕರು ಹೆಸರು ನೋಂದಾಯಿಸಿದ್ದಾರೆ. ಅಲ್ಲದೇ, ರೂಟ್, ಹೈಡ್ರೇಶನ್ ಪಾಯಿಂಟ್ಸ್, ಕ್ರೀಡಾಪಟುಗಳು ಓಡುವ ಪ್ರಮುಖ ಸ್ಥಳಗಳಿಗೆ ತೆರಳಿ ಪರಿಶೀಲನೆ ನಡೆಸಲಾಗಿದೆ. ನಗರದ ಎಲ್ಲರೂ ಈ ಕ್ರೀಡಾಕೂಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ನಾವೇದ ನಾಗಠಾಣ ಮಾತನಾಡಿ, ಈವರೆಗೆ ಸಾಮಾಜಿಕ ಜಾಲತಾಣಗಳಲ್ಲಿ ವೃಕ್ಷಥಾನ್ ಹೆರಿಟೇಜ್ ರನ್– 2023 ಆಯೋಜನೆ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ. ಅಲ್ಲದೇ, ಇದರಲ್ಲಿ ಪಾಲ್ಗೊಳ್ಳುತ್ತಿರುವ ಖ್ಯಾತನಾಮರ ಕುರಿತು ಕೂಡ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೋರ್ ಕಮೀಟಿಯ ಮುಖಂಡರಾದ ಸಂಕೇತ ಬಗಲಿ, ಶಿವನಗೌಡ ಪಾಟೀಲ, ಸಂಗಮೇಶ ಬಬಲೇಶ್ವರ, ಶಾಂತೇಶ ಕಳಸಗೊಂಡ, ಸಂತೋಷ ಔರಸಂಗ, ಶಿವಾನಂದ ಯರನಾಳ, ಅಮೀತ ಬಿರಾದಾರ, ನಾವೀದ ನಾಗಠಾಣ, ಸೋಮು ಮಠ, ಆಕಾಶ ಚೌಕಿಮಠ, ಮಹೇಶ ವಿ. ಶಟಗಾರ, ಜಗದೀಶ ಪಾಟೀಲ ಮುಂತಾದವರು ಉಪಸ್ಥಿತ–ರಿದ್ದರು.

# ಲೋಕ್ ಅದಾಲತ್: 693 ಪ್ರಕರಣಗಳು ಇತ್ಯರ್ಥ

**ಉದಯರಶ್ಮಿ ನ್ಯೂಸ್**






ಮುದ್ದೇಬಿಹಾಳ: ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಇಲ್ಲಿನ ನ್ಯಾಯಾಲಯಗಳ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ ಅದಾಲತನ್ನು ಏರ್ಪಡಿಸಲಾಗಿತ್ತು.

ಸದರಿ ಲೋಕ ಅದಾಲತ್ ನಲ್ಲಿ ಎರಡು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 6182 ಬಾಕಿ ಇರುವ ಪ್ರಕರಣಗಳಲ್ಲಿ 1905 ಪ್ರಕರಣಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಸದರಿ ಪ್ರಕರಣಗಳಲ್ಲಿ ಒಟ್ಟು 693 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗಿದೆ. ಅದರಲ್ಲಿ ಅಪರಾಧ ಪ್ರಕರಣಗಳು, ಎಂವಿಸಿ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೆಂಟೇನೆನ್ಸ್ ಪ್ರಕರಣಗಳು, ಪಾಲು ವಾಟ್ನಿ ದಾವೆಗಳು, ಎಲ್‌ಎಸಿ ಇಪಿ ಪ್ರಕರಣಗಳು, ಎಮ್‌ವಿಸಿ ಇಪಿ ಪ್ರಕರಣಗಳು, ಅಪರಾಧ ದಂಡ ಪ್ರಕರಣಗಳು, ಹಾಗೂ ಅಬಕಾರಿ ಇಲಾಖೆಯ ಪ್ರಕರಣಗಳನ್ನು ರಾಜಿ ಸಂಧಾನ ಮೂಲಕ ಇತ್ಯರ್ಥ ಪಡಿಸಲಾಯಿತು.

ಮತ್ತು ಪೂರ್ವದಾವೆ ಪ್ರಕರಣಗಳಲ್ಲಿ, ಕಂದಾಯ ಇಲಾಖೆಯ ಕಂದಾಯ ಅದಾಲತ್ ಪ್ರಕರಣಗಳು, ಬ್ಯಾಂಕಿನ ಪ್ರಕರಣಗಳು, ಬಿ ಎಸ್‌ಎನ್‌ಎಲ್ ಪ್ರಕರಣಗಳು, ಅರಣ್ಯ ಇಲಾಖೆಯ ಹಾಗೂ ಅಬಕಾರಿ ಇಲಾಖೆಯ ಪ್ರಕರಣಗಳು ಸೇರಿ ಒಟ್ಟು 3261 ಪ್ರಕರಣಗಳಲ್ಲಿ 559 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯಥ–ರ್ಗೊಂಡಿವೆ. ಸದರಿ ಮೇಲ್ಕಾಣಿಸಿದ ಪ್ರಕರಣಗಳನ್ನು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷೆ ಲಕ್ಷ್ಮೀ ನಿಂಗಪ್ಪ ಗರಗ ಹಾಗೂ ಸದಸ್ಯ ಕಾರ್ಯದರ್ಶಿ ಶ್ರೀ ಸಂಪತಕುಮಾರ ಬಳೂಲಗಿಡದ ಇವರು ರಾಜೀಸಂಧಾನದ ಮೂಲಕ ಇತ್ಯರ್ಥ ಪಡಿಸಿದರು.

ನ್ಯಾಯಾಂಗ ಸಂಧಾನಕಾರರಾಗಿ ಯಮನಪ್ಪ ಹಾಗೂ ಬಿಪಿ ಮ್ಯಾಗೇರಿ ವಕೀಲರುಗಳು, ಸರಕಾರಿ ವಕೀಲ ಬಸವರಾಜ ಆಹೇರಿ ಹಾಗೂ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ ಮತ್ತು ತಾಲೂಕಾ ಕಾನೂನು ಸೇವಾ ಸಮಿತಿಯ ಆಡಳಿತ ಸಹಾಯಕ ಹಾಗೂ ನ್ಯಾಯಾಲಯದ ಸಿಬ್ಬಂದಿ ಅರವಿಂದ ಕುಂಬಾರ, ಶಿರಸ್ತೇದಾರ ಎಸ್‌ಎಸ್ ಚಕ್ರಮನಿ, ಸುರೇಶ ಬಳಗಾನೂರ, ಎಮ್‌ಎಫ್. ಜೇವರ್ಗಿ, ಸಿಬ್ಬಂದಿಗಳಾದ ಎ.ಆರ್. ಮುಜಾವರ, ಪ್ರಸನ್ನ ಎಸ್, ವಿ.ಸಿ ಶಿವಣಗಿ, ಅಮಿದಾ ನದಾಫ್, ಎಮ್.ಎಸ್ ಸಾಲಿಮಠ, ಜ್ಯೋತಿ ಹೆಬ್ಬಾಳ, ಪಿ.ಎಲ್.ಗಾಯಕವಾಡ, ಕಾವೇರಿ ರಾಠೋಡ, ಮಹಾಂತೇಶ್ ಹಚರೆಡ್ಡಿ, ನರ್ಮದಾ ಮರೋಳ, ಜ್ಯೋತಿ ಹೆಬ್ಬಾಳ, ರಾಜೇಶ್ವರಿ, ಮಧು ಧರ್ಮಗಿರಿ, ಎಸ್.ಎಸ್ ಹರನಾಳ, ಚೆನ್ನಮ್ಮ ಬಾಗೇವಾಡಿ, ರೇಣುಕಾ ಜಾನಮಟ್ಟಿ, ಬಿ.ಎಸ್ ಹುಣಶ್ಯಾಳ, ಬಿ.ಆರ್ ಹುಣಶ್ಯಾಳ, ಗುರು ಲಾಳಿ, ಮಂಜುಳಾ ಹೊಸಮನಿ, ಮಂಜುಳಾ ಕಟ್ಟಿಮನಿ, ನೀಲಮ್ಮ ಬಡಿಗೇರ. ಶ್ರುತಿ ಜಾಯಿ ಹಿರಿಯ ನ್ಯಾಯವಾದಿಗಳಾದ ವಿ.ಎಮ್ ನಾಗಠಾಣ, ಜೆ.ಎ ಚಿನಿವಾರ, ಎಸ್.ಆರ್ ಸಜ್ಜನ. ಏನ್.ಜಿ ಕುಲಕರ್ಣಿ. ಏನ್.ಆರ್ ಮೋಕಾಶಿ. ಎಮ್. ಆರ್ ಪಾಟೀಲ. ಎಮ್.ಎಚ್ ಕ್ವಾರಿ. ನ್ಯಾಯವಾದಿಗಳಾದ ಚೇತನ ಶಿವಶಿಂಪಿ, ಬಿ.ಎಮ್ ಮುಂದಿನಮನಿ. ಆಯ್.ಎಸ್ ಹಗಟಗಿ. ಎಮ್. ಎ ಲಿಂಗಸೂರ. ಏನ್.ಬಿ ಮುದ್ನಾಳ, ಪಿ.ಬಿ ಗೌಡರ, ಕುಮಾರಿ ಹಸೀನಾ ಅನಂತಪೂರ, ಶ್ರೀದೇವಿ ರಾಜೂರ್, ಎಸ್.ಎಂ ಕಿಣಗಿ. ಆಯ್.ಎಸ್ ಹಗಟಗಿ. ಎಲ್.ಎಸ್ ಮೇಟಿ, ರವಿ ನಾಲತವಾಡ ಸೇರಿದಂತೆ ಎಲ್ಲ ನ್ಯಾಯವಾದಿಗಳು ನ್ಯಾಯಾಲಯ ಸಿಬ್ಬಂದಿಗಳು ಭಾಗಿಯಾಗಿದ್ದರು.

# ರಾವುತರಾಯನ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ



**ಉದಯರಶ್ಮಿ ನ್ಯೂಸ್**

ದೇವರಹಿಪ್ಪರಗಿ: ಸಾಂಪ್ರದಾಯಿಕ ಭಟ್ಟಿ ಜಾತ್ರೆಯ ಅಂಗವಾಗಿ ರಾವುರಾಯನು ಪಲ್ಲಕ್ಕಿ ಉತ್ಸವದ ಮೂಲಕ ಮಲ್ಲಯ್ಯನ ದೇವಸ್ಥಾನ ಪ್ರವೇಶಿಸಿದನು.

ಪಟ್ಟಣದಲ್ಲಿ ಪ್ರತಿವರ್ಷ ಭಟ್ಟಿ ಅಮವಾಸ್ಯೆಯ ನಂತರ ಜರುಗುವ ರಾವುತರಾಯನ ಪಲ್ಲಕ್ಕಿ ಉತ್ಸವಕ್ಕೆ ಗುರುವಾರ ಚಾಲನೆ ನೀಡಲಾಯಿತು. ಬೆಳಿಗ್ಗೆ ಬೇಗನೆ ಆರಂಭಗೊಳ್ಳಬೇಕಾಗಿದ್ದ ಉತ್ಸವ ಕೆಲವು ಕಾರಣಗಳಿಂದ ವಿಳಂಬವಾಗಿ ಆರಂಭಗೊಂಡಿತು. ಮಧ್ಯಾನ್ಹ ತಡವಾಗಿ ಮಲ್ಲಯ್ಯನ ದೇವಸ್ಥಾನ ತಲುಪಿದ ರಾವುತರಾಯನು ಪಲ್ಲಕ್ಕಿ ಉತ್ಸವ ಸೇರಿದಂತೆ ಸಾಂಪ್ರದಾಯಿಕ ಆಚರಣೆಗಳ ನಂತರ ದೇವಸ್ಥಾನದಲ್ಲಿ ಆಸೀನನಾದನು.

ರಾವುತರಾಯನು ಮಲ್ಲಯ್ಯನ ದೇವಸ್ಥಾನದಲ್ಲಿ ಷಷ್ಠಿಯವರೆಗೆ ಅಂ–ದರೆ ಆರು ದಿನಗಳವರೆಗೆ ಇದ್ದು ನಂತರ ಮಂಗಳವಾರ ಮರಳಿ ತನ್ನ ಮೂಲದೇವಸ್ಥಾನಕ್ಕೆ ಮರಳುವನು. ಈ ಭಟ್ಟಿ ಜಾತ್ರೆಯ ಅಂಗವಾಗಿ ದಿ:20 ಬುಧವಾರದವರೆಗೆ ಜಾನುವಾರಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ ಮೇಳ ಪ್ರತಿವರ್ಷದಂತೆ ನಡೆಯಲಿದ್ದು, ಈ ಬಾರಿ ವಿಜಯಪುರ ರಸ್ತೆಯಲಿರುವ ಗುರುಬಾಳಪ್ಪ ಯರಗಲ್ ಇವರ ಜಮೀನಿನಲ್ಲಿ ಜರುಗಲಿದೆ.

ಕಾರಣಿಕರ ಹೇಳಿಕೆಗಳು:

ಪ್ರತಿವರ್ಷವು ಭಟ್ಟಿ ಜಾತ್ರೆಯ ಸಂದರ್ಭದಲ್ಲಿ ಶೀಡಗಟ್ಟಿ ಎಂಬ ಸ್ಥಳದಲ್ಲಿ ಕಾರಣಿಕರು ಹೇಳಿಕೆಗಳನ್ನು ಹೇಳುವ ಪದ್ಧತಿಯಿದ್ದು, ಈ ವರ್ಷ ಅವರು ಹೇಳಿದಂತೆ, "ಬಿಳಿ ಕಾಳು ಮೇಲಾಯಿತು, ನಂತರ ಗೋಧಿ, ಹತ್ತಿ ಬೆನ್ನು ಹತ್ತಿದವು. ಯಾರು ನನ್ನಂತೆ (ದೇವರಂತೆ) ಇರುವುರೋ, ಅವರ ಪರ ನಾನಿರುವೆ. ಧರ್ಮ ಹಿಡಿದು ನಡೆದವರನ್ನು ಅಂಗೈಯಲ್ಲಿ ಲಿಂಗದಂತೆ ಕಾಪಾಡುವೆ. ನಿಮ್ಮ ನಿಮ್ಮ ನ್ಯಾಯ ತಂದು ನನ್ನ ಉಡೆಯಲ್ಲಿ ಹಾಕಬೇಡಿ, ಏಳು ಮಂದಿ ಅಕ್ಕ, ತಂಗಿಯರು ಅಗಸಿ ಬಾಗಿಲಲ್ಲಿ ಕುಳಿತಿದ್ದಾರೆ ಆದ–ರೂ ಅದನ್ನು ಬಯಲು ಮಾಡಿ ತೋರಿಸುವೆ. ಯಾವುದೇ ಕಾರಣಕ್ಕೂ ಅವಸರ ಬೇಡ ನನ್ನ ಕುದುರೆ ಹತ್ತಿ ನಾನು ಬರುವೆ ಎದೆಗುಂದಬೇಡಿ ಎಂದು ನುಡಿಯಲಾಯಿತು.

# ಹಳೆಯ ವಿದ್ಯಾರ್ಥಿಗಳಿಂದ ಸರ್ಕಾರಿ ಶಾಲೆಗಳಿಗೆ ಮರುಜೀವ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಅಂತರಾಷ್ಟ್ರೀಯ ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಬೇಕಾಗುವ ಮೂಲಸೌಕರ್ಯಗಳನ್ನು ಒದಗಿಸಿ ಸರ್ಕಾರಿ ಶಾಲಾ ಮಕ್ಕಳಿಗೆ ಉನ್ನತ ದರ್ಜೆಯ ತರಬೇತಿ ಕಲ್ಪಿಸಲು ಜಂಟಿಯಾಗಿ ಶ್ರಮಿಸುತ್ತಿರುವ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘ ಹಾಗೂ ಎಸ್.ಡಿ.ಎಂ.ಸಿಯವರ ಕಾರ್ಯ ನಾಡಿಗೆ ಮಾದರಿಯಾಗಿದೆ ಶಿಕ್ಷಣ ಸಂಯೋಜಕ ಎಚ್.ಎ.ಮೇಟಿ ಹೇಳಿದರು.

ತಾಲೂಕಿನ ಬಸರಕೋಡ ಗ್ರಾಮದ ಸರಕಾರಿ ಹಿರಿಯ ಪ್ರಾಥ–ಮಿಕ ಶಾಲೆಯಲ್ಲಿ ನಿರ್ಮಿಸಲಾದ ಪ್ಲೇ ಸ್ಕೂಲ್ ಮಾದರಿಯ ನಲಿಕಲಿ ಕೊಠಡಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು

ಕಾರ್ಪೋರೇಟ್ ಮಾದರಿಯಲ್ಲಿ ಸರಕಾರಿ ಶಾಲೆಯನ್ನು ಕಟ್ಟಿ ಬೆಳೆಸಲು ಬಸರಕೋಡದಲ್ಲಿ ನಡೆದ ಆಂದೋಲನ ರಾಜ್ಯಕ್ಕೆ ಮಾದರಿಯಾಗಿದ್ದು ಹಳೆಯ ವಿದ್ಯಾರ್ಥಿಗಳ ಪಾಲುದಾರಿಕೆಯಿಂದ ಉತ್ಕೃಷ್ಟ ಮಾನವ ಸಂಪನ್ಮೂಲ ನಿರ್ಮಿಸಲು ಸಾಧ್ಯ ಎಂದರು.

ಮುಖ್ಯ ಅತಿಥಿಯಾಗಿದ್ದ ವಿಶ್ರಾಂತ ಸಮಾಜ ಕಲ್ಯಾಣಾಧಿಕಾರಿ ಆರ್.ಬಿ.ಪಂಪಾಗೋಳ ಮಾತನಾಡಿ, ಆಧುನಿಕತೆಯ ಪ್ರಭಾವ ಮತ್ತು ಆಂಗ್ಲ ವ್ಯಾಮೋಹದ ಹೊಡೆತಕ್ಕೆ ಸಿಲುಕಿ ತನ್ನ ಗತವೈಭವ ಕಳೆದುಕೊಂಡ ಸರ್ಕಾರಿ ಶಾಲೆಗಳಿಗೆ ಮರುಜೀವ ಕೊಡಲು ಹಳೆ ವಿದ್ಯಾರ್ಥಿಗಳು ಮನಪೂರ್ವಕ ಕೈಜೋಡಿಸುವುದು ಸಧ್ಯ ಅಗತ್ಯ ಎಂದರು.

ನಿವೃತ್ತ ಉಪ ತಹಶಿಲ್ದಾರ ಡಿ.ಬಿ.ಬೇಲಾಳ,

ಚಿಂತಕ ಅರವಿಂದ ಕೊಪ್ಪ ಮಾತನಾಡಿ ಶಾಲೆಯನ್ನು ಮಾನವ ಸಂಪನ್ಮೂಲ ಉತ್ಪಾದನಾ ಕೇಂದ್ರವನ್ನಾಗಿ ಪರಿವರ್ತಿಸಲು ಅಗತ್ಯವಿರುವ ಮೂಲಸೌಕರ್ಯಗಳ ಅಳವಡಿಸುವುದರ ಜೊತೆ ದಕ್ಷತೆ, ತತ್ಪರತೆ ಹಾಗೂ ಕ್ಷಮತೆಯಿಂದ ಕೆಲಸ ಮಾಡುವ ಶಿಕ್ಷಕ ವರ್ಗವೂ ಅಷ್ಟೇ ಮುಖ್ಯವೆಂಬ ಭಾವ ಶಾಲೆಯಲ್ಲಿ ನಿರ್ಮಾಣವಾಗಬೇಕು ಎಂದರು.

ವಿಶ್ರಾಂತ ವೈಧ್ಯಾಧಿಕಾರಿ ಡಾ. ಎಸ್.ವ್ಹಿ ಒಡ್ಡೋಡಗಿ, ವಲಯ ಸಂಪನ್ಮೂಲ ವ್ಯಕ್ತಿ ಅಮರೇಶ ಕಸಬೇಗೌಡ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಎಸ್.ಡಿ.ಎಂ.ಸಿ ಅಧ್ಯಕ್ಷ ಚಾಂದಬಾಷಾ ಮಾಳನೂರ ಅಧ್ಯಕ್ಷತೆ ವಹಿಸಿದ್ದರು.

ನ್ಯಾಯವಾದಿ ರಶ್ಮಿ ಕೊಪ್ಪ, ಮೋಹನಂದ ಬಾಗಲಕೋಟ, ಬಿಲಾಲ ಗೊಳಸಂಗಿ, ಬಸವರಾಜ ಡಮನಾಳ ಸೇರಿದಂತೆ ಮತ್ತಿತರರು ಅತಿಥಿಗಳಾಗಿ ಭಾಗವಹಿಸಿದ್ದರು. ರೇಣುಕಾ ಚಿತ್ತವಾಡಗಿ, ಕುಮಾರಸ್ವಾಮಿ, ಮಹದೇವ ಹೊಳಿ ಕಾರ್ಯಕ್ರಮ ನಿರ್ವಹಿಸಿದರು.

# ಡಿ.14ರಂದು ಸೇತುಬಂಧ ಪುನಶ್ಚೇತನ ಶಿಬಿರ ಸಮಾರೋಪ

**ಉದಯರಶ್ಮಿ ನ್ಯೂಸ್**

ಸಿಂದಗಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂ–ರಿನ ಸಂಸ್ಕೃತ ನಿರ್ದೇಶನಾಲಯ ಹಾಗೂ ಶ್ರೀ ಪದ್ಮರಾಜ ಸಂಸ್ಕೃತ ವೇದ ಪಾಠಶಾಲೆಯ ಇವರ ಸಹಯೋಗದೊಂದಿಗೆ ಸೇತುಬಂಧ 03–04ನೆಯ ಸಾಲಿನ ಪುನಶ್ಚೇತನ ಶಿಬಿರ ಹಾಗೂ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ವಿಶೇಷ ತರಬೇತಿ ಸಮಾರೋಪ ಸಮಾರಂಭವನ್ನು ಡಿ.14ರಂದು ಬೆಳಿಗ್ಗೆ 9ಗಂಟೆಗೆ ಸಾತವಿರೇಶ್ವರ ಸಭಾಭವನದಲ್ಲಿ ಜರುಗಲಿದೆ ಎಂದು ಸಂಯೋಜಕ ಡಾ.ಮಲ್ಲನಗೌಡ ಎಸ್. ತಿಳಿಸಿದ್ದಾರೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸಾರಂಗಮಠದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ವಹಿಸಿಕೊಳ್ಳಲಿದ್ದಾರೆ. ಸಾನಿಧ್ಯವನ್ನು ಡಾ. ವಿಶ್ವಪ್ರಭುದೇವ ಶಿವಾಚಾರ್ಯರು, ಕನ್ನೊಳ್ಳಿ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯರು ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅರುಣ ಶಹಾಪೂರ, ಅಧ್ಯಕ್ಷತೆಯನ್ನು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಪಾಲಯ್ಯ ಸಿ, ಪ್ರಮಾಣ ಪತ್ರ ವಿತರಣೆಯನ್ನು ವಿಜಯಪುರ ಬಿ.ಎಲ್.ಡಿ.ಇ ಸೊಸೈಟಿ, ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಪ್ರಾಂಶುಪಾಲರಾದ ಡಾ.ಸಂಜಯ್ ಕಡ್ಲಿಮಟ್ಟಿ ನೀಡಲಿದ್ದಾರೆ ಎಂದು ಬೆಂಗಳೂರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವೆ ಡಾ. ರೂಪಾಶ್ರೀ ಎಸ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತ ನೆಲದಲ್ಲಿ ಹುಟ್ಟಲು ಪುಣ್ಯ ಮಾಡಿರಬೇಕು :ಪಟ್ಟಣದ

**ಉದಯರಶ್ಮಿ ನ್ಯೂಸ್**




ಮುದ್ದೇಬಿಹಾಳ: ಧರ್ಮದ ರಕ್ಷಣೆ ಒಬ್ಬರಿಗೆ ಸೀಮಿತವಾಗಿಲ್ಲ. ಸನಾತನ ಸಂಸ್ಕೃತಿ ಬೆಳೆಸಿ, ಉಳಿಸಿ ಮುಂದಿನ ತಲೆಮಾರಿಗೆ ತಲುಪಿಸುವಲ್ಲಿ ಪ್ರತಿಯೊಬ್ಬನ ಜವಾಬ್ದಾರಿ ಅಡಕವಾಗಿದೆಯೆಂದು ಬಸವೇಶ್ವರ ಪತ್ತಿನ ಸಹಕಾರಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಮಹಾಂತೇಶ ಎಸ್. ಪಟ್ಟಣದ ಹೇಳಿದರು.

ಪಟ್ಟಣದ ಸಂಗಮೇಶ್ವರ ನಗರದಲ್ಲಿರುವ ಸಂತ ಕನಕದಾಸ ಪ್ರಾಥಮಿಕ ಶಾಲೆಯಲ್ಲಿ ನಡೆದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಯತಿವರೇಣ್ಯರಾದ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಆಯೋಜಿಸಿರುವ ಭಗವದ್ಗೀತಾ ಅಭಿಯಾನ ಕರ್ನಾಟಕ–2023ರ ತಾಲೂಕು ಮಟ್ಟದ ಸಪ್ತಾಹದ 4ನೇ ದಿನದ ಉಪನ್ಯಾಸಮಾಲಿಕೆ ಕಾರ್ಯಕ್ರಮದಲ್ಲಿ ಸುಂದರ ಬದುಕಿಗೆ ಭಗವದ್ಗೀತೆ ಎನ್ನುವ ವಿಷಯದ ಮೇಲೆ ಅವರು ಉಪನ್ಯಾಸ ನೀಡಿದರು.

ಹಿಂದಿನ ಕಾಲ ಘಟ್ಟದಲ್ಲಿ ಭಾರತೀಯ ಋಷಿಮುನಿಗಳು ತಾವು ತಪಸ್ಸು ಮಾಡಿ ಅದರ ಫಲವನ್ನು ಜಗತ್ತಿಗೆ ನೀಡುತ್ತಾ ಬಂದ ನಿದರ್ಶನಗಳಿವೆ. ಮಹಾಭಾರತ ಕಥೆಗೆ ವೇದ ವ್ಯಾಸರ ಕೊಡುಗೆ ಅಪಾರ. ಆದ–ುದರಿಂದಲೇ ಜಗತ್ತಿಗೆ 5ನೇ ವೇದವಾಗಿ ಹೊರಹೊಮ್ಮಿದೆ. ಭಾರತ ನೆಲದಲ್ಲಿ ಹುಟ್ಟಲು ಪುಣ್ಯ ಮಾಡಿರಬೇಕು. ಅಂತಹ ಭಾಗ್ಯಶಾಲಿಗಳಾದ ನಾವು ಯಾವತ್ತೂ ನಮ್ಮ ನೆಲ ಮತ್ತು ದೇಶಕ್ಕೆ ಧಕ್ಕೆಬಾರದಂತೆ ನೋಡಿಕೊಳ್ಳಬೇಕು. ಕೃಷ್ಣನ ಆರಾಧನೆಯಲ್ಲಿ ಸರ್ವಸ್ವವನ್ನು ಸಮರ್ಪಿಸಿ ಪರಮಾತ್ಮನ ಸಾಕ್ಷಾತ್ಕಾರ ಪಡೆದ ಸಂತರ ಸಾಲಿನಲ್ಲಿ ಅಗ್ರಗಣ್ಯರಾದ ಕನಕದಾಸರ ಹರಿಭಕ್ತಿ ಸಾರ ಭಗವದ್ಗೀತೆಯ ತತ್ವದ ಮೇಲೆ ನಿಂತಿದೆ ಎಂದರು.

ಸಂಸ್ಥೆಯ ಅಧ್ಯಕ್ಷ ಎಮ್.ಬಿ.ಪಾಟೀಲ್ ಮಾತನಾಡಿ, ಶ್ರೇಷ್ಠ ಗ್ರಂಥವಾದ ಭಗವದ್ಗೀತೆಯ ಅಧ್ಯಯನ ಆಗಬೇಕಾಗಿದೆ. ಕೃಷ್ಣನ ಸಾಕ್ಷಾತ್ಕಾರ ಪಡೆದ ಸಂತ ಕನಕದಾಸರ ಹೆಸರಿನ ಮೇಲೆ ನಡೆಯುತ್ತಿರುವ ನಮ್ಮ ಶಾಲೆಯಲ್ಲೂ ಭಗವದ್ಗೀತೆಯ ಅಧ್ಯಾಪನ ಮತ್ತು ಅಧ್ಯಯನಕ್ಕೆ ಅವಕಾಶ ಮಾಡಿಕೊಡಲಾಗುವುದು. ತನ್ಮೂಲಕ ಸಾಮಾಜಿಕ ಶಾಂತಿ ಸಾಧಿಸಬೇಕಾಗಿದೆ ಎಂದರು.

ಈ ವೇಳೆ ನಿವೃತ್ತ ದೈಹಿಕ ಶಿಕ್ಷಕ ಎಸ್. ಎಲ್.ಗುರುವ್, ಮುಖ್ಯಗುರು ಎಮ್.ಎನ್.ಯರಝುರಿ, ಎ.ಸಿ.ಕಬಾಡೆ, ಆರ್.ವಾಯ್.ಪಾಟೀಲ್ ಸೇರಿದಂತೆ ಇತರರು ಇದ್ದರು. ಜ್ಞಾನ ಭಾರತಿ ವಿದ್ಯಾ ಮಂದಿರದ ಗೀತಾ ಗಾಯನ ತಂಡದ ಗುರುಮಾತೆ ರಂಜಿತಾ ಹೆಗಡೆ ನೇತೃತ್ವದಲ್ಲಿ ಸಾಮೂಹಿಕವಾಗಿ ಭಗವದ್ಗೀತೆಯ 10ನೇ ಅಧ್ಯಾಯವನ್ನು ಪಠಿಸಿದರು.

ಮುಖ್ಯೋಪಾಧ್ಯಾಯ ಎಮ್. ಎನ್.ಯರಝುರಿ ಸ್ವಾಗತಿಸಿದರು. ಸಂಚಾಲಕ ರಾಮಚಂದ್ರ ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಶಿಕ್ಷಕ ಗೋಪಾಲ ಹೂಗಾರ ನಿರೂಪಿಸಿ, ವಂದಿಸಿದರು.

# ಕರದಳ್ಳಿ ಸದ್ಭಾವನಾ ಪುರಸ್ಕಾರಕ್ಕೆ ಹ.ಮ.ಪೂಜಾರ ಆಯ್ಕೆ

ಉದಯರಶ್ಮಿ ನ್ಯೂಸ್



ಸಿಂದಗಿ: ಶಹಾಪುರದ ಶ್ರೀ ಚಂದ್ರಕಾಂತ ಕರದಳ್ಳಿ ಪ್ರತಿಷ್ಠಾನದಿಂದ ಪ್ರತಿ ವರ್ಷದಂತೆ ಕೊಡಮಾಡುವ ಕರದಳ್ಳಿ ಸದ್ಭಾವನಾ ಪುರಸ್ಕಾರಕ್ಕೆ 2023ನೇ ಸಾಲಿಗೆ ಸಿಂದಗಿಯ ಮಕ್ಕಳ ಸಾಹಿತಿ ಹ.ಮ. ಪೂಜಾರ ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ನಾಗರಾಜ ಕರದಳ್ಳಿ ತಿಳಿಸಿದ್ದಾರೆ.

ಆಯ್ಕೆ ಸಮಿತಿಯಲ್ಲಿ ವಿಮರ್ಶಕ ಸಿ.ಎಸ್. ಭೀಮರಾಯ, ಸಾಹಿತಿ ದೊಡ್ಡಬಸಪ್ಪ ಬಳೂರಗಿ ಹಾಗೂ ಪತ್ರಕರ್ತ ರವಿ ಹಿರೇಮಠ ಇದ್ದರು. ಜ.19 ರಂದು ಶಹಾಪುರ ಪಟ್ಟಣದಲ್ಲಿ ಜರಗುವ ಲಿಂ.ಚಂದ್ರಕಾಂತ ಕರದಳ್ಳಿ ನಾಲ್ಕನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಲಾಗುವುದು. ಪ್ರಶಸ್ತಿ ಪತ್ರ, ಸ್ಮರಣಿಕೆ ಜತೆ ನಗದು 5000 ರೂ. ನೀಡಿ ಗೌರವಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಂಬಾಕು ಸೇವನೆ: ವಿಶ್ವಾದ್ಯಂತ ವರ್ಷಕ್ಕೆ 8 ದಶಲಕ್ಷಕ್ಕೂ ಹೆಚ್ಚು ಸಾವು

ಉದಯರಶ್ಮಿ ನ್ಯೂಸ್

ಸಿಂದಗಿ: ಸಾರ್ವಜನಿಕ ಆರೋಗ್ಯದ ದೊಡ್ಡ ಬೆದರಿಕೆಗಳಲ್ಲಿ ತಂಬಾಕು ಸೇವನೆಯು ಒಂದಾಗಿದೆ, ಇದು ವಿಶ್ವದಾದ್ಯಂತ ವರ್ಷಕ್ಕೆ 8 ದಶಲಕ್ಷಕ್ಕೂ ಹೆಚ್ಚು ಜನರನ್ನು ಕೊಲ್ಲುತ್ತಿದೆ ಎಂದು ತಹಶೀಲ್ದಾರ್ ಪ್ರದೀಪಕುಮಾರ ಹಿರೇಮಠ ಹೇಳಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಆವರಣದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ವಿಜಯಪುರ, ಸಿಂದಗಿ ತಾಲೂಕು ಆರೋಗ್ಯ ಇಲಾಖೆ, ಸಿ.ಎಂ. ಮನಗೂಳಿ ಪದವಿ ಕಾಲೇಜು ಮತ್ತು ಜಿ.ಪಿ.ಪೋರವಾಲ್ ಕಾಲೇಜು ಎನ್.ಸಿ.ಸಿ ಘಟಕದ ಸಹಯೋಗದೊಂದಿಗೆ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಂಡ ಗುಲಾಬಿ ಆಂದೋಲನ ಜನ ಜಾಗೃತಿ




ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಂಬಾಕು ಸಾಂಕ್ರಾಮಿಕವು ಭಾರತದಾದ್ಯಂತ ಸಾರ್ವಜನಿಕ ಆರೋಗ್ಯಕ್ಕೆ ದೊಡ್ಡ ಅಪಾಯವಾಗಿದೆ. ಹೃದಯ ಸಂಬಂಧಿ ಕಾಯಿಲೆಗಳು, ಉಸಿರಾಟದ ಕಾಯಿಲೆಗಳು ಮತ್ತು ಕ್ಯಾನ್ಸರ್ ಸೇ-ರಿದಂತೆ ಹೆಚ್ಚಿನ ಸಾಂಕ್ರಾಮಿಕವಲ್ಲದ ಕಾಯಿಲೆಗಳ ಬೆಳವಣಿಗೆಗೆ ಇದು ಸಾಮಾನ್ಯ ಅಪಾಯಕಾರಿ ಅಂಶಗಳಾಗಿವೆ. ಮನೆಯ ದೈನಂದಿನ ಆಹಾರ ಮತ್ತು ಮೂಲಭೂತ ಅಗತ್ಯಗಳಿಗೆ ವೆಚ್ಚಗಳನ್ನು ಮಾಡುವ ಬದಲಾಗಿ ತಂಬಾಕಿಗೆ ಖರ್ಚು ಮಾಡುವ ಮೂಲಕ ತಂಬಾಕು ಬಳಕೆಯು ಬಡತನಕ್ಕೆ ಕಾರಣವಾಗಿದೆ.

ಈ ವೇಳೆ ತಾಲೂಕಾ ಆರೋಗ್ಯಾಧಿಕಾರಿ ಡಾ.ಎ.ಎ.ಮಾಗಿ, ತಾಲೂಕಾ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ.ಕುಲಕರ್ಣಿ, ತಾಲೂಕಾ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ವಾಯ್.ಚೌಡಕಿ, ಆರೋಗ್ಯ ನಿರೀಕ್ಷಣಾಧಿಕಾರಿ ವಿರೇಂದ್ರ ಪವಾಡೆ, ಎಸಿಡಿಪಿಒ ಎಸ್.ಎನ್ ಕೋರವಾರ, ರವಿ ಲಮಾಣಿ, ರವಿ ಗೋಲಾ ಸೇ-ರಿದಂತೆ ಆಶಾ ಕಾರ್ಯಕರ್ತೆಯರು ಹಾಗೂ ತಾಲೂಕಿನ ವಿವಿದ ಇಲಾಖೆಯ ಅಧಿಕಾರಿಗಳು, ಜಿ.ಪಿ.ಪೋರವಾಲ ಹಾಗೂ ಸಿ.ಎಮ್. ಮನಗೂಳಿ ಕಾಲೇಜಿನ ಎನ್.ಸಿ.ಸಿ, ಎನ್ ಎಸ್.ಎಸ್, ಸ್ಕೌಟ್ಸ್ ಮತು ಗೈಡ್ಸ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಉಪನ್ಯಾಸಕರು ಉಪಸ್ಥಿತರಿದ್ದರು.

## ಸಿಂದಗಿ-ದೇವರಹಿಪ್ಪರಗಿ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಜಿಪಂ ಸಿಇಓ ರಾಹುಲ್ ಶಿಂಧೆ

# ಕೂಲಿಕಾರರ ಮಕ್ಕಳಿಗೆ ಶಿಶುಪಾಲನಾ ಕೇಂದ್ರದಲ್ಲಿ ಆಸರೆ

ಉದಯರಶ್ಮಿ ನ್ಯೂಸ್

ವಿಜಯಪುರ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರು ಬುಧವಾರ ಸಿಂದಗಿ ಹಾಗೂ ದೇವರಹಿಪ್ಪರಗಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಕುಡಿಯುವ ನೀರಿನ ಕಾಮಗಾರಿ, ನರೇಗಾ, ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ, ವಿವಿಧ ಶಾಲೆಗಳಲ್ಲಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಸಿಂದಗಿ ತಾಲೂಕಿನ ಕೊಕಟನೂರ ಗ್ರಾಮಕ್ಕೆ ಭೇಟಿ ನೀಡಿದ ಅವರು ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಶಿಶು ಪಾಲನಾ ಕೇಂದ್ರವನ್ನು (ಕೂಸಿನ ಮನೆ) ಉದ್ಘಾಟನೆ ಮಾಡಿದರು.

ನಂತರ ಮಾತನಾಡಿದ ಅವರು ಗ್ರಾಮೀಣ ಭಾಗದಲ್ಲಿ ಕೆಲಸ ನಿರ್ವಹಿಸುವ ಕೂಲಿಕಾರರು ಮತ್ತು ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರರು ತಮ್ಮ ಮಕ್ಕಳನ್ನು ಶಿಶುಪಾಲನಾ ಕೇಂದ್ರದಲ್ಲಿ ಬಿಟ್ಟು, ನಿಶ್ಚಿಂತೆಯಿಂದ ಕೆಲಸಕ್ಕೆ ಹೋಗಬಹುದು. ನಿಮ್ಮ ಮಕ್ಕಳ ಸಂಪೂರ್ಣ ಜವಾಬ್ದಾ-ರಿಯನ್ನು ಸರಕಾರ ತನ್ನ ಮಡಿಲಿಗೆ ಹಾಕಿಕೊಂಡಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕೇಂದ್ರದಲ್ಲಿರುವ ಮಕ್ಕಳನ್ನು ಪ್ರೀತಿಯಿಂದ, ಸೇವಾ ಮನೋಭಾವದಿಂದ ನೋಡಿಕೊಳ್ಳುವಂತೆ ಆರೈಕೆದಾರ-ರಿಗೆ ಸೂಚಿಸಿದರು. ಪ್ರಸ್ತುತ ಕೇವಲ 9 ಮಕ್ಕಳು ನೋಂದಣಿಯಾಗಿದ್ದು, ಮುಂದಿನ ದಿನದಲ್ಲಿ ಜನರಿಗೆ ಈ ಕೇಂದ್ರದ ಕುರಿತು ಜಾಗೃತಿ ಮೂಡಿಸಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ನಂತರ ಕೊಕಟನೂರ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ-1 ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಸರಿಯಾಗಿ ಶಾಲಾ ಪೂರ್ವ ಶಿಕ್ಷಣ ನೀಡಬೇಕು. ಕೇಂದ್ರದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಅಂಗನವಾಡಿ ಮೇಲ್ವಿಚಾರಕರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಸೂಚಿಸಿದರು.

ನಂತರ ದೇವರ ಹಿಪ್ಪರಗಿ ತಾಲೂಕಿನ ಕೊರವಾರ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಸಿಬ್ಬಂದಿಗಳ ಹಾಜರಾತಿ ಮತ್ತು ವಿವಿಧ



ಯೋಜನೆಗಳ ದಾಖಲಾತಿಗಳನ್ನು ಪರಿಶೀಲನೆ ಮಾಡಿದರು. ಈ ಸಮಯದಲ್ಲಿ ಸಿಬ್ಬಂದಿಗಳಿಗೆ ಸಮಯಕ್ಕನುಸಾರವಾಗಿ ಕೆಲಸಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಸೂಚಿಸಿದರು. ಸಾರ್ವಜನಿಕರಿಂದ ಯಾವುದೇ ರೀತಿಯ ದೂರು ಸ್ವೀಕೃತವಾಗದಂತೆ ಕೆಲಸ ನಿರ್ವಹಿಸಲು ಕಟ್ಟು ನಿಟ್ಟಿನ ಸೂಚನೆ ನೀಡಿದರು.

ನಂತರ ಗ್ರಾಮದಲ್ಲಿರುವ ಪ್ರಾಥ-'ಮಿಕ ಅರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಸಿಬ್ಬಂದಿಗಳ ಹಾಜರಾತಿ, ವಿವಿಧ ವಿಭಾಗಗಳನ್ನು ವೀಕ್ಷಿಸಿ, ಆಸ್ಪತ್ರೆಯಲ್ಲಿ ಸ್ವಚ್ಛತೆ ಕಾಪಾಡುವ ಜೊತೆಗೆ ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಉತ್ತಮವಾದ ಸೇವೆ ನೀಡಲು ವೈದ್ಯಾಧಿಕಾರಿಗಳಿಗೆ ತಿಳಿಸಿದರು. ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸುವ ವೈದ್ಯರ ಮತ್ತು ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ತಾಲೂಕು ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ನಂತರ ಗ್ರಾಮದ ಹೊರವಲಯದ ಜಲಧಾರೆ ಯೋಜನೆಯ ಸ್ಟಾಕ್ ಯಾರ್ಡ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ಮಾಡಿದರು. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್ ರಿಂದ ಯೋಜನೆಯ ಕುರಿತು ಮಾಹಿತಿ ಪಡೆದುಕೊಂಡರು. ಸ್ಥಳದಲ್ಲಿದ್ದ ಎಂ.ಎಸ್. ಪೈಪ್, ಡಿಐ ಪೈಪ್, ಹಾಗೂ ಎಚ್‌ಡಿಪಿಇ ಎಂ.ಎಸ್.ಪೈಪ್ ಗಳಿಗೆ ಸಿಮೆಂಟ್ ಪರದೆ ಮಾಡುವ ಕೆಲಸವನ್ನು ಪರಿಶೀಲನೆ ಮಾಡಿ, ಕಾಮಗಾರಿಯನ್ನು ಗುಣಮಟ್ಟದಿಂದ ಮತ್ತು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ತಿಳಿಸಿದರು.

ತದನಂತರ, ಹಂದಿಗನೂರು ಗ್ರಾಮ ಪಂಚಾಯತಗೆ ಭೇಟಿ ನೀಡಿ ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲನೆ ನಡೆಸಿದರು. ಅನುಮೋದನೆಯಾಗದಿರುವ ಸಿಬ್ಬಂದಿಗಳು ಇದ್ದಲ್ಲಿ, ಅವರು ಅರ್ಹರಾಗಿದ್ದಲ್ಲಿ ಅಂತಹ ಸಿಬ್ಬಂದಿಗಳ ಪಟ್ಟಿಯನ್ನು ಅನುಮೋದನೆಗಾಗಿ ಜಿಲ್ಲಾ ಪಂಚಾಯತಿಗೆ ಸಲ್ಲಿಸಬೇಕು. ನಂತರ ಗ್ರಾಮದ ವಸತಿ ಯೋಜನೆಯ ಫಲಾನುಭವಿಗಳ ಮನೆಗೆ ಭೇಟಿ ನೀಡಿ, ವಸತಿ ಯೋಜನೆಯಿಂದ ಬಂದಿರುವ ಕಂತಿನ ಕುರಿತು ಮಾಹಿತಿ ಪಡೆದುಕೊಂಡರು. ಸೂರಿಲ್ಲದವರಿಗೆ ಸರಕಾರ ವಸತಿ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಅವಕಾಶ ನೀಡಿದ್ದು, ಫಲಾನುಭವಿಗಳು ಬಹುಕಾಲ ಬಾಳಿಕೆ ಬರುವಂತೆ ಮನೆಗಳನ್ನು ನಿರ್ಮಿಸಿಕೊಳ್ಳಬೇಕು. ಗ್ರಾಮದಲ್ಲಿ ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆದುಕೊಂಡು ಕಾಮಗಾರಿ ಅನುಷ್ಠಾನ ಮಾಡಬೇಕು ಎಂದು ಹೇಳಿದರು.

ನಂತರ ನರೇಗಾ ಕೂಲಿ ಕೆಲಸಕ್ಕೆ ಬರುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಿ ನಮೂನೆ 6ನ್ನು ವಿತರಣೆ ಮಾಡಿದರು. ಇದಾದ ನಂತರ ಗ್ರಾಮದ ಸರಕಾರಿ ಪ್ರಾಥ-'ಮಿಕ ಶಾಲೆಗೆ ಭೇಟಿ ನೀಡಿ ಮಕ್ಕಳ ಜೊತೆ ಪಠ್ಯ ವಿಷಯಗಳ ಕುರಿತು ಚರ್ಚೆ ನಡೆಸಿದರು. ಶಾಲೆಯಲ್ಲಿರುವ ಸೌಲಭ್ಯಗಳ ಕುರಿತು, ಕುಡಿಯುವ ನೀರು, ಶೌಚಾಲಯ, ಬಿಸಿಯೂಟದ ಕುರಿತು ಹೀಗೆ ವಿವಿಧ ವಿಷಯಗಳ ಕುರಿತು ಮಕ್ಕಳೊಂದಿಗೆ ಚರ್ಚೆ ನಡೆಸಿದರು.

ನಂತರ ಸಿಂದಗಿ ತಾಲೂಕು ಪಂಚಾಯತಿ ಸಭಾಭವನದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿಗಳಾದ ನಿಂಗಪ್ಪ ಗೋಠೆ, ಸಿಂದಗಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮು ಜಿ ಅಗ್ನಿ, ಸಹಾಯಕ ನಿರ್ದೇಶಕರಾದ ನಿತ್ಯಾನಂದ ಯಲಗೋಡ, ಪಿಆರ್‌ಇಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಮ್.ಎಸ್. ಮುರಾಳ, ಸಿಡಿಪಿಒ ಶಂಭುಲಿಂಗ ಹಿರೇಮಠ, ಬಿಇಓ ಆರಿಫ್ ಬಿರಾದಾರ, ಕೃಷಿ ಸಹಾಯಕ ನಿರ್ದೇಶಕ ಎಚ್.ವಾಯ್. ಸಿಂಗೇಗೋಳ, ತೋಟಗಾರಿಕೆ ಸಹಾಯಕ ನಿರ್ದೇಶಕ ರಾಘವೇಂದ್ರ ಬಗಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

## ವ್ಯಕ್ತಿತ್ವ ವಿಕಸನ ಮಾಲೆ.. 28

# ಒಳ್ಳೆಯತನವೇ ದೌರ್ಬಲ್ಯವಾಗಿರುವುದೇ?



ಜಯ್ ನುಡಿ

● ಜಯಶ್ರೀ.ಜೆ.ಅಬ್ಬಿಗೇರಿ
ಇಂಗ್ಲೀಷ್ ಉಪನ್ಯಾಸಕರು, ಬೆಳಗಾವಿ
9449234142

ಹದಿ ಹರೆಯದ ವಯಸ್ಸಿನಲ್ಲಿ ನಡೆದಾಡೋ ನೆಲ ಕಾಣೊಲ್ಲ ಅಂತಾರೆ. ಅಂಥ ವಯಸ್ಸಿನಲ್ಲಿ ಹಿರಿಯರ ಮಾತು ಕಿವಿಗೆ ಬೀಳುವುದೂ ಅಷ್ಟಕ್ಕಷ್ಟೆ. ಓದಿನಲ್ಲಿ ಗಮನವಿಲ್ಲದ್ದಕ್ಕೆ ಪಿಯುಸಿ ಅರ್ಧಂಬರ್ಧ. ಗೋತಾ ಹೊಡೆದ ವಿಷಯ ಕಟ್ಟಿ ಪಾಸೋಗೋಕೆ ಮನಸ್ಸಿಲ್ಲ. ಕೆಲಸಕ್ಕೆ ಅಂತ ಅಲ್ಲಿ ಇಲ್ಲಿ ಅಲೆದರೆ ಅನುಭವವೂ ಇಲ್ಲ, ಕೆಲಸಕ್ಕೆ ಅಗತ್ಯವಿರುವ ಶಿಕ್ಷಣವೂ ಇಲ್ಲ ಅಂತ ಯಾರೂ ಕೆಲಸ ಕೊಡುವುದಿಲ್ಲ. ಒಂದುವೇಳೆ ಸಣ್ಣ ಪುಟ್ಟ ಕೆಲಸ ಸಿಕ್ಕರೂ ಅವು ಮನಸ್ಸಿಗೆ ಹಿಡಿಸಲ್ಲ. ಕಲಿತಿದ್ದೇ ಕಡಿಮೆ ಅಂದ ಮೇಲೆ ಒಳ್ಳೆಯ ಸಂಬಳವನ್ನು ನಿರೀಕ್ಷಿಸುವ ಹಾಗಿಲ್ಲ. ಹೋಗಲಿ ಏನಾದರೂ ವ್ಯಾಪಾರ ಮಾಡೋಣ ಅಂದರೆ ಮೂರು ಹೊತ್ತಿನ ಊಟಕ್ಕೆ ಲಾಟರಿ ಹೊಡೆಯುವ ಸ್ಥಿತಿಯಲ್ಲಿ ಅದು ಸಾಧ್ಯವಿರದ ಮಾತು. ಆರಕ್ಕೇರದ ಮೂರಕ್ಕಿಳಿಯದ ಆರ್ಥಿಕ ಸ್ಥಿತಿಯಲ್ಲಿ ಬಂಡವಾಳ ಹೊಂದಿಸುವುದು ಕಷ್ಟ. ಹೀಗೆ ದಿಕ್ಕು ತಪ್ಪಿದ ಮನೋ ಸ್ಥಿತಿಯಲ್ಲಿ ಏನು ಮಾಡಬೇಕೆಂದು ತೋಚದೇ ದುಡ್ಡಿನ ಹಿಂದೆ ಅಲೆಯುತ್ತ ಇಸ್ಪಿಟ್ ಕ್ರಿಕೆಟ್ ಬೆಟ್ಟಿಂಗ್‌ನಂಥ ದಂಧೆಯಲ್ಲಿ ಸಿಲುಕಿಕೊಂಡು ನರಳುವುದು. ಅಪ್ಪ ಬಡವನಾಗಿದ್ದಕ್ಕೆ ನಮಗಿಂದು ಈ ಸ್ಥಿತಿ ಎಂದು ಕೊರಗುವ ಯುವಕರು ಒಂದೆಡೆ. ಗೆಳೆಯರ ಪಟಾಲಂ ಕಟ್ಟಿಕೊಂಡು ತಿರುಗುವ ಮಕ್ಕಳಿಗೆ ಅದೆಷ್ಟು ಬೈದು ಬುದ್ಧಿ ಹೇಳಿದರೂ ಪ್ರಯೋಜನವಿಲ್ಲ ಎಂದು ಗೊತ್ತಾದ ಪಾಲಕರು' ಅವರ ಹಣೆ ಬರಹದಲಿದ್ದದ್ದು ಆಗುತ್ತೆ.' ಎಂದು ಕೈ ಚೆಲ್ಲಿ ಕುಳಿತುಕೊಳ್ಳುವ ಪೋಷಕರು ಇನ್ನೊಂದೆಡೆ.

ಮೆಚ್ಚುಗೆಗೆ ಮರಳಾಗದಿರಿ

ಸಮಾಜದಲ್ಲಿರುವ ಸ್ವಾರ್ಥಿಗಳ ಕಂಡು ಮನಸ್ಸು ರೋಧಿಸುತ್ತದೆ. ಏನಾದರೂ ಮಾಡಿ ತಾನು ಎಲ್ಲರ ಮುಂದೆ ಎದ್ದು ನಿಲ್ಲಬೇಕು ಗುರುತಿಸಿಕೊಳ್ಳಬೇಕೆಂದು ಮನಸ್ಸು ತಯಾರಾಗುತ್ತದೆ. ಮಾಡುವುದೇನು ಕೈಯಲ್ಲಿ ಕಾಸಿಲ್ಲ.ಕಾಸು ಗಳಿಸೋಕೆ ದುಡಿಮೆ ಇಲ್ಲ. ತಾನು ಕಷ್ಟದ ಮಡುವಿನಲ್ಲಿದ್ದರೂ ಪರರ ದುಃಖ ಕಂಡರೆ ಕರಗಿ ನೆರವಾಗುವ ಮನಸ್ಸು.. ಉಡಾಳ ಪೋಲಿ ಎನಿಸಿಕೊಳ್ಳುವುದಕ್ಕಿಂತ ಕಂಡವರ



ಕಷ್ಟಗಳಿಗೆ ಹೆಗಲಾಗುವುದೆಂದರೆ ಅದಕ್ಕಿಂತ ಖುಷಿ ಬೇರೆ ಇಲ್ಲ. ಗುಣವುಳ್ಳವರು ಕಷ್ಟಕ್ಕಾಗಿದ್ದನ್ನು ಕಂಡು ಮೆಚ್ಚುಗೆ ವ್ಯಕ್ತ ಪಡಿಸಿದರೆ ಸಾಕು.ತನ್ನ ಭವಿಷ್ಯ ನಿರ್ಮಾಣದಂಥ ಮುಖ್ಯ ಕಾರ್ಯ ಬಿಟ್ಟು ಸಂಬಂಧಿಸಿಲ್ಲದ ಕೆಲಸ ಕಾರ್ಯಗಳಲ್ಲಿ ಮೂಗು ತೂರಿಸಿ ಅನೇಕ ಸಂಕಷ್ಟಗಳಿಗೆ ಬಲಿಯಾಗುವುದು. ಅತ್ಯಧಿಕ ಕ್ರಿಯಾ ಶಕ್ತಿ ಹೊಂದಿದ ವಯಸ್ಸಿನಲ್ಲಿ ಪುಡಿ ರಾಜಕಾರಣಿಗಳ ಮುಂದೆ ನಿಂತು ಅವರು ಹೇಳಿದ ಎಲ್ಲವನ್ನೂ ಹಿಂದೆ ಮುಂದೆ ವಿಚಾರಿಸದೇ ಹುಂಬರಂತೆ ಮಾಡುವುದು. ಕೊಟ್ಟ ದುಡ್ಡನ್ನು ಕೆಟ್ಟ ಚಟಗಳಲ್ಲಿ ಮಜಾ ಮಾಡುತ್ತ ಉಡ-ಾಯಿಸುವುದು. ಒಟ್ಟಿನಲ್ಲಿ ಜೀವನವೇ ಬಿಂದಾಸ್ ಆಗಿದೆ ಎಂದುಕೊಳ್ಳುವುದು. ಪ್ರಭಾವಿ ವ್ಯಕ್ತಿಗಳು ಭಾಗವಹಿಸಿದ ಸಭೆಗಳಲ್ಲಿ ಅವರ ಸನ್ಮಾನದಲ್ಲಿ ಭಾಗವಹಿಸಿದ ಫೋಟೊ ಸುದ್ದಿ ಪತ್ರಿಕೆಯಲ್ಲಿ ಬಂದಾಗ ನಾನು ಎತ್ತರಕ್ಕೆ ಬೆಳಿತಿದಿನಿ ಎನ್ನುವ ಭ್ರಮೆಯಲ್ಲಿ ಬೀಗುವುದು. ಒಮ್ಮೊಮ್ಮೆ ಪೋಲಿಸ್ ಬೆತ್ತದ ರುಚಿಯನ್ನು ನೋಡುವ ಪ್ರಸಂಗ ಬಂದಾಗ ತಾನೇ ಹೆಣೆದ ಬಲೆಯಲ್ಲಿ ತಾನು ಸಿಕ್ಕಿ ಹಾಕಿಕೊಂಡಿದ್ದು ಗೊತ್ತಾಗುವುದು. ಇದುವರೆಗೂ ತನ್ನಿಂದ ಲಾಭ ಪಡೆದವರು ತನ್ನ ಕಷ್ಟಗಳಿಗೆ ಸ್ಪಂದಿಸದೆ ಮರೆಯಾಗಿದ್ದನ್ನು ಕಂಡು ಪಶ್ಚಾತ್ತಾಪ ಪಡುವ ಸಮಯ ಬಂದೊದುಗುವುದು.

ಒಳ್ಳೆಯವರೆಂದು ತೋರಿಸಲು ಹೋಗದಿರಿ

ನಾವು ಒಳ್ಳೆಯವರು ಎಂದು ಸಾಕ್ಷೀಕರಿಸಲು ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುವುದು ಎಷ್ಟು ಸರಿ? ಬದುಕು ಮಹತ್ವದ ತಿರುವಿನಲ್ಲಿರುವಾಗ ಬೇರೆಯವರಿಗೆ ಉಪಕಾರ ಮಾಡುವ ನೆಪದಲ್ಲಿ ತನ್ನನ್ನು ತಾನು ಅವನತಿಯತ್ತ ಕೊಂಡೊಯ್ದು ದುಃಖ ಪಟ್ಟರೆ ಹೇಗೆ? ನಮ್ಮ ಗುರಿ ಸ್ಪಷ್ಟವಾಗಿಸಿಕೊಳ್ಳದೇ ಇದ್ದರೆ, ನಮ್ಮನ್ನು ಇತರರು ತಮ್ಮ ಗುರಿ ಸಾಧನೆಗೆ ಸಾಧನವನ್ನಾಗಿ ಬಳಸಿಕೊಳ್ಳುತ್ತಾರೆ ನೆನಪಿರಲಿ. ನನ್ನನ್ನು ಬೆಳೆಸುವರೆಂದು ಇಷ್ಟು ದಿನ ನಂಬಿದವರು ದೂರವಾದಾಗ ನಿಮಗೆ ನಿಮ್ಮ ಮೇಲೆ ಅಸಹ್ಯ ಬೇಸರ ಉಂಟಾಗುತ್ತದೆ. ಇಷ್ಟೆಲ್ಲ ಬೇಡವಾದ ಕೆಲಸಗಳಲ್ಲಿ ತೊಡಗಿಕೊಂಡಾಗ ಗೆಳೆಯರಲ್ಲಿ ಕೆಲವರು, ಪರಿಚಯದವರು ಚೆಂದದ ಜೀವನ ರೂಪಿಸಿಕೊಂಡು ಸಮಾಜದಲ್ಲಿ ಗುರುತಿಸಿಕೊಂಡಿದ್ದನ್ನು ಕಂಡು ಬೆರಗಾಗುವ ಸನ್ನಿವೇಶ. ಛೇ! ನಾನೂ ಅವರಂತೆ ನನ್ನ ಉದ್ಧಾರಕ್ಕೆ ಶ್ರಮ ಪಟ್ಟಿದ್ದರೆ ಇಂದು ಈ ಹೀನ ಸ್ಥಿತಿ ಬರುತ್ತಿರಲಿಲ್ಲವೆಂದು ಹಣೆಗೆ ಕೈ ಹಚ್ಚಿ ಕುಳಿತುಕೊಳ್ಳ ಬೇಕಾಗುವುದು. ಇತರರಿಗೆ ಸಹಾಯ ಮಾಡಿದ್ದು ತಪ್ಪೇ? ಬರೀ ನಾನು ನನ್ನದು ಎನ್ನುವುದು ಸ್ವಾರ್ಥವಲ್ಲವೇ? ಎಂಬ ಪ್ರಶ್ನೆಗಳು ಕಾಡುವವು. ನಮ್ಮ ವ್ಯಕ್ತಿತ್ವ ವಿಕಸನದ ಕುರಿತು ವಿಚಾರಿಸಿ ಅದರಲ್ಲಿ ಮಗ್ನರಾಗುವುದು ಖಂಡಿತ ಸ್ವಾರ್ಥವಲ್ಲ. ನಮ್ಮ ಕಾಲ ಮೇಲೆ ನಾವು ನಿಂತ ಮೇಲೆ ಅಸಹಾಯಕರಿಗೆ ದೀನ ದಲಿತರಿಗೆ ಸಹಾಯ ಮಾಡಲು ಸ್ಥಿತಿವಂತರಾಗುತ್ತೇವೆ. ಎಂಬುದು ಸತ್ಯದ ಮಾತು. ನಮ್ಮ ಬಾಳು ನಿರ್ಣಾಯಕ ಹಂತದಲ್ಲಿರುವಾಗ ಪ್ರಭಾವಿ ವ್ಯಕ್ತಿಗಳ ಹಿಂದೆ ಬೆನ್ನು ಹತ್ತಿ ಓಡಾಡಿದರೆ ಸಮಯ ವ್ಯಯಿಸಿದರೆ ಮುಂದೆ ಕಷ್ಟದ ಬುತ್ತಿ





ಕಾಯುತ್ತಿರುತ್ತದೆ. ಎನ್ನುವುದು ನೂರಕ್ಕೆ ನೂರರಷ್ಟು ದಿಟ.

ದೌರ್ಬಲ್ಯವನ್ನೇ ಬಲವಾಗಿಸಿ

ನನ್ನವರು ಅಂತ ಯಾರೂ ಇಲ್ಲ ಎಂಬ ಭಾವನೆ ಕಾಡತೊಡಗಿದಾಗ ನನಗೆ ನಾನೇ ಎಲ್ಲ ಎಂಬ ಆತ್ಮ ಸಾಕ್ಷಿ ಪ್ರಬಲವಾಗಬೇಕೇ ಹೊರತು ನನಗಾರೂ ಇಲ್ಲ ಎನ್ನುವ ಚಿಂತೆ ಕಾಡಬಾರದು. ಎಲ್ಲ ಸಮಸ್ಯೆಗಳಿಗೆ ಎರಡು ಔಷಧಿಗಳಿವೆ. ಒಂದು ದುಡಿಮೆ ಮತ್ತೊಂದು ತಾಳ್ಮೆ. ಸಹನೆ ಇಲ್ಲದೇ ಏನೂ ಸಾಧಿಸಲು ಸಾಧ್ಯವಿಲ್ಲ. ಯಾರನ್ನೂ ಮೆಚ್ಚಿಸುವ ಪ್ರಯತ್ನ ಬೇಡ. ಕಠಿಣ ಪರಿಶ್ರಮದ ಪ್ರಯತ್ನಕ್ಕೆ ಗೆಲುವು ತಾನೇ ಬಳಿ ಬರುವುದು. ಭಾವನೆ ಒಳ್ಳೆಯದಾಗಿಸಿಕೊಂಡರೆ ಭಾಗ್ಯವೂ ಬೆನ್ನತ್ತಿ ಬರುವುದು. ನಮ್ಮ ಒಳ್ಳೆಯತನ ದೌರ್ಬಲ್ಯವಾಗದಿರಲಿ. ನಮಗೆ ತಿಳಿಯದೇ ಇರುವ ದೌರ್ಬಲ್ಯವನ್ನು ನಾವೆಂದೂ ತೊಡೆದು ಹಾಕಲಾರೆವು. ದೌರ್ಬಲ್ಯದಾಚೆ ಹೊರ ಬರಲು ಪ್ರಥಮ ಹೆಜ್ಜೆಯೆಂದರೆ ನಮ್ಮ ದೌರ್ಬಲ್ಯಗಳ ಬಗ್ಗೆ ಚೆನ್ನಾಗಿ ತಿಳಿಯುವುದು. ದೌರ್ಬಲ್ಯಗಳನ್ನೇ ನವೋಲ್ಲಾಸ ಮತ್ತು ಚೈತನ್ಯ ತುಂಬುವ ಬಲಗಳಾಗಿ ಪರಿವರ್ತಿಸುತ್ತ ಗಮನ ಹರಿಸುವುದು ಅಗತ್ಯವಾಗಿದೆ.

ಯಂಡಮೂರಿ ವೀರೇಂದ್ರನಾಥ-'ವರು ಹೇಳಿದಂತೆ,'ಏಳು ಎದ್ದೇಳು ಹೊರಡು ನಿನ್ನನ್ನು ಅಲುಗಾಡದಂತೆ ಮಾಡಿದ ಆ ಮಾನಸಿಕ ಸಂಕೋಲೆಗಳನ್ನು ಭೇದಿಸು. ಬಿದ್ದ ಜಾಗದಿಂದಲೇ ಓಟ ಶುರು ಮಾಡು..



### ಹೊನ್ನಳ್ಳಿ ಗ್ರಾಮದ ರಾಜೀವ ಗಾಂಧಿ ಪ್ರೌಢಶಾಲೆ । ಶಿಕ್ಷಕರ ಕೊರತೆಯಿಂದ ರೋಸಿ ಹೋದ ವಿದ್ಯಾರ್ಥಿಗಳು

# ವಿದ್ಯಾರ್ಥಿಗಳಿಂದ ಶಾಲೆಗೆ ಬೀಗ :ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಶಿಕ್ಷಕರ ಕೊರತೆಯಿಂದಾಗಿ ವಿದ್ಯಾಭ್ಯಾಸ ಹಾಳಾಗುತ್ತಿದೆ. ಈ ಬಗ್ಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲವೆಂದು ಹೇಳಿ ತಾಲೂಕಿನ ಹೊನ್ನಳ್ಳಿ ಗ್ರಾಮದಲ್ಲಿರುವ ರಾಜೀವ ಗಾಂಧಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು ಶಾಲೆಗೆ ಬೀಗ ಹಾಕಿ ಬುಧವಾರ ಪ್ರತಿಭಟನೆ ನಡೆಸಿದರು.



ತಾಲೂಕಿನ ಹೊನ್ನಳ್ಳಿ ಗ್ರಾಮದ ರಾಜೀವ ಗಾಂಧಿ ಪ್ರೌಢ ಶಾಲೆಯಲ್ಲಿ 8–10ನೇ ತರಗತಿವರೆಗೂ 187 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಆದರೆ, ಗಣಿತ ಹಾಗೂ ಸಮಾಜ ವಿಜ್ಞಾನ ಶಿಕ್ಷಕರು ಇಲ್ಲದೆ ಇರುವುದರಿಂದ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. 625ಕ್ಕೆ 625 ಅಂಕ ಪಡೆಯಬೇಕು ಎಂದು ಹೇಳುತ್ತಾರೆ. ಆದರೆ, ನಮಗೆ ಸರಿಯಾಗಿ ಕಲಿಸಲು ಶಿಕ್ಷಕರಿಲ್ಲ ಎಂದು 10ನೇ ತರಗತಿ ವಿದ್ಯಾರ್ಥಿನಿ ಅಶ್ವಿನಿ ವಡ್ಡರ ತಮ್ಮ ಸಮಸ್ಯೆ ಹೇಳಿಕೊಂಡರು.

ಶಿಕ್ಷಕರ ಸಮಸ್ಯೆಯಿಂದ ಈ ಹಿಂದೆ ಒಮ್ಮೆ ಬೀಗ ಹಾಕಿ ಪ್ರತಿಭಟನೆ ಮಾಡಿದ್ದೇವೆ. ಬಿಇಒ ಕಚೇರಿಗೆ ಹೋಗಿ ಎನ್ನುತ್ತಾರೆ. ಗಣಿತ, ಸಮಾಜ ವಿಜ್ಞಾನ ಶಿಕ್ಷಕರಿಲ್ಲದೆ ತೀವ್ರ ತೊಂದರೆಯಾಗುತ್ತಿದೆ ಎಂದು 10ನೇ ತರಗತಿ ವಿದ್ಯಾರ್ಥಿ ದೇವರಾಜ ಗೋಲಗೇರಿ ತಾವು ಎದುರಿಸುತ್ತಿರುವ ತೊಂದರೆ ಹೇಳಿದರು.

ಗ್ರಾಮೀಣ ಭಾಗದ ಮಕ್ಕಳಿಗೆ ಸರ್ಕಾರಿ ಶಾಲೆಗಳೇ ಶಿಕ್ಷಣ–ಕ್ಕೆ ಬಹುದೊಡ್ಡ ಆಧಾರ. ಹತ್ತಾರು ಸಮಸ್ಯೆಗಳ ನಡುವೆ ವಿದ್ಯಾರ್ಥಿಗಳು ಓದಿ ಸಾಧನೆ ಮಾಡಬೇಕು ಎಂದುಕೊಂಡಿರುತ್ತಾರೆ. ಆದರೆ, ಶಿಕ್ಷಕರೆ ಇಲ್ಲದೆ ಹೋದರೆ ಅವರ ಓದು ಏನಾಗಬೇಕು? ಇಂತಹ ಕಾರಣಗಳಿಂದಾಗಿಯೇ ಗ್ರಾಮೀಣ ಭಾಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗಿ ಭವಿಷ್ಯ ಕಮ–ರಿಹೋಗುತ್ತಿದೆ. ಸಿಂದಗಿ ಬಿಇಒ ಆರೀಫ್ ಬಿರಾದಾರ ಅವರು ಕೂಡಲೇ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯಾರ್ಥಿಗಳ ಓದಿಗೆ ನೆರವಾಗಬೇಕಿದೆ ಎಂದು ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.


## ಬೇಕಾಗಿದ್ದಾರೆ

ರಾಜ್ಯ ಸರಕಾರದಿಂದ ಮಾನ್ಯತೆ ಪಡೆದಿರುವ Evergreen Agri Bio-tech ಸಂಸ್ಥೆಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ.

ವಯಸ್ಸು –18ರಿಂದ 35 ವರ್ಷ

ವಿದ್ಯಾರ್ಹತೆ –PUC, Diploma agri, Bsc Agri and any Degree.

**ಸಂಪರ್ಕಿಸುವ ವಿಳಾಸ**

Sy No 150, Shop No 1, Sukun Nagar,
Near Balamkar Convention Hall,
Ring Road, Vijayapur.

Mob-9449170346, 8861615728


### ಸಿಂದಗಿ–ದೇವರಹಿಪ್ಪರಗಿ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಜಿಪಂ ಸಿಇಓ ರಾಹುಲ್ ಶಿಂಧೆ

# ಕೂಲಿಕಾರರ ಮಕ್ಕಳಿಗೆ ಶಿಶುಪಾಲನಾ ಕೇಂದ್ರದಲ್ಲಿ ಆಸರೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರು ಬುಧವಾರ ಸಿಂದಗಿ ಹಾಗೂ ದೇವರಹಿಪ್ಪರಗಿಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಕುಡಿಯುವ ನೀರಿನ ಕಾಮಗಾರಿ, ನರೇಗಾ, ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ, ವಿವಿಧ ಶಾಲೆಗಳಲ್ಲಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಸಿಂದಗಿ ತಾಲೂಕಿನ ಕೊಕಟನೂರ ಗ್ರಾಮಕ್ಕೆ ಭೇಟಿ ನೀಡಿದ ಅವರು ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಶಿಶು ಪಾಲನಾ ಕೇಂದ್ರವನ್ನು (ಕೂಸಿನ ಮನೆ) ಉದ್ಘಾಟನೆ ಮಾಡಿದರು.

ನಂತರ ಮಾತನಾಡಿದ ಅವರು ಗ್ರಾಮೀಣ ಭಾಗದಲ್ಲಿ ಕೆಲಸ ನಿರ್ವಹಿಸುವ ಕೂಲಿಕಾರರು ಮತ್ತು ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿಕಾರರು ತಮ್ಮ ಮಕ್ಕಳನ್ನು ಶಿಶುಪಾಲನಾ ಕೇಂದ್ರದಲ್ಲಿ ಬಿಟ್ಟು, ನಿಶ್ಚಿಂತೆಯಿಂದ ಕೆಲಸಕ್ಕೆ ಹೋಗಬಹುದು. ನಿಮ್ಮ ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನು ಸರಕಾರ ತನ್ನ ಮಡಿಲಿಗೆ ಹಾಕಿಕೊಂಡಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಕೇಂದ್ರದಲ್ಲಿರುವ ಮಕ್ಕಳನ್ನು ಪ್ರೀತಿಯಿಂದ, ಸೇವಾಮನೋಭಾವದಿಂದ ನೋಡಿಕೊಳ್ಳುವಂತೆ ಆರೈಕೆದಾರ–ರಿಗೆ ಸೂಚಿಸಿದರು. ಪ್ರಸ್ತುತ ಕೇವಲ 9 ಮಕ್ಕಳು ನೋಂದಣಿಯಾಗಿದ್ದು, ಮುಂದಿನ ದಿನದಲ್ಲಿ ಜನರಿಗೆ ಈ ಕೇಂದ್ರದ ಕುರಿತು ಜಾಗೃತಿ ಮೂಡಿಸಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದರು.

ನಂತರ ಕೊಕಟನೂರ ಗ್ರಾಮದ ಅಂಗನವಾಡಿ ಕೇಂದ್ರ ಸಂಖ್ಯೆ–1 ಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಸರಿಯಾಗಿ ಶಾಲಾ ಪೂರ್ವ ಶಿಕ್ಷಣ ನೀಡಬೇಕು. ಕೇಂದ್ರದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಅಂಗನವಾಡಿ ಮೇಲ್ವಿಚಾರಕರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತರಿಗೆ ಸೂಚಿಸಿದರು.

ನಂತರ ದೇವರ ಹಿಪ್ಪರಗಿ ತಾಲೂಕಿನ ಕೊರವಾರ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಸಿಬ್ಬಂದಿಗಳ ಹಾಜರಾತಿ ಮತ್ತು ವಿವಿಧ ಯೋಜನೆಗಳ ದಾಖಲಾತಿಗಳನ್ನು ಪರಿಶೀಲನೆ ಮಾಡಿದರು. ಈ ಸಮಯದಲ್ಲಿ ಸಿಬ್ಬಂದಿಗಳಿಗೆ ಸಮಯಕ್ಕನುಸಾರವಾಗಿ ಕೆಲಸಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಸೂಚಿಸಿದರು. ಸಾರ್ವಜನಿಕ–ರಿಂದ ಯಾವದೇ ರೀತಿಯ ದೂರು ಸ್ವೀಕೃತ್ತವಾಗದಂತೆ ಕೆಲಸ ನಿರ್ವಹಿಸಲು ಕಟ್ಟು ನಿಟ್ಟಿನ ಸೂಚನೆ ನೀಡಿದರು.

ನಂತರ ಗ್ರಾಮದಲ್ಲಿರುವ ಪ್ರಾಥ–ಮಿಕ ಅರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಅವರು, ಸಿಬ್ಬಂದಿಗಳ ಹಾಜರಾತಿ, ವಿವಿಧ ವಿಭಾಗಗಳನ್ನು ವೀಕ್ಷಿಸಿ, ಆಸ್ಪತ್ರೆಯಲ್ಲಿ ಸ್ವಚ್ಛತೆ ಕಾಪಾಡುವ ಜೊತೆಗೆ ಆಸ್ಪತ್ರೆಗೆ ಬರುವ ಸಾರ್ವಜನಿಕರಿಗೆ ಉತ್ತಮವಾದ ಸೇವೆ ನೀಡಲು ವೈಧ್ಯಾಧಿಕಾರಿಗಳಿಗೆ ತಿಳಿಸಿದರು. ಕರ್ತವ್ಯದಲ್ಲಿ ನಿರ್ಲಕ್ಷ್ಯ ವಹಿಸುವ ವೈಧ್ಯರ ಮತ್ತು ಸಿಬ್ಬಂದಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ತಾಲೂಕು ವೈಧ್ಯಾಧಿಕಾರಿಗಳಿಗೆ ಸೂಚಿಸಿದರು.

ನಂತರ ಗ್ರಾಮದ ಹೊರವಲಯದ ಜಲಧಾರೆ ಯೋಜನೆಯ ಸ್ಟಾಕ್ ಯಾರ್ಡ್ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲನೆ ಮಾಡಿದರು. ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್ ರಿಂದ ಯೋಜನೆಯ ಕುರಿತು ಮಾಹಿತಿ ಪಡೆದುಕೊಂಡರು. ಸ್ಥಳದಲ್ಲಿದ್ದ ಎಂ.ಎಸ್. ಪೈಪ್, ಡಿಐ ಪೈಪ್, ಹಾಗೂ ಎಚ್‌ಡಿಪಿಇ ಎಂ.ಎಸ್.ಪೈಪ್ ಗಳಿಗೆ ಸಿಮೆಂಟ್ ಪರದೆ ಮಾಡುವ ಕೆಲಸವನ್ನು ಪರಿಶೀಲನೆ ಮಾಡಿ, ಕಾಮಗಾರಿಯನ್ನು ಗುಣಮಟ್ಟದಿಂದ ಮತ್ತು ನಿಗದಿತ ಸಮಯದೊಳಗೆ ಪೂರ್ಣಗೊಳಿಸಲು ತಿಳಿಸಿದರು.



ತದನಂತರ, ಹಂದಿಗನೂರು ಗ್ರಾಮ ಪಂಚಾಯತಗೆ ಭೇಟಿ ನೀಡಿ ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲನೆ ನಡೆಸಿದರು. ಅನುಮೋದನೆಯಾಗದಿರುವ ಸಿಬ್ಬಂದಿಗಳು ಇದ್ದಲ್ಲಿ, ಅವರು ಅರ್ಹರಾಗಿದ್ದಲ್ಲಿ ಅಂತಹ ಸಿಬ್ಬಂದಿಗಳ ಪಟ್ಟಿಯನ್ನು ಅನುಮೋದನೆಗಾಗಿ ಜಿಲ್ಲಾ ಪಂಚಾಯತಿಗೆ ಸಲ್ಲಿಸಬೇಕು. ನಂತರ ಗ್ರಾಮದ ವಸತಿ ಯೋಜನೆಯ ಫಲಾನುಭವಿಗಳ ಮನೆಗೆ ಭೇಟಿ ನೀಡಿ, ವಸತಿ ಯೋಜನೆಯಿಂದ ಬಂದಿರುವ ಕಂತಿನ ಕುರಿತು ಮಾಹಿತಿ ಪಡೆದುಕೊಂಡರು. ಸೂರಿಲ್ಲದವರಿಗೆ ಸರಕಾರ ವಸತಿ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಅವಕಾಶ ನೀಡಿದ್ದು, ಫಲಾನುಭವಿಗಳು ಬಹುಕಾಲ ಬಾಳಿಕೆ ಬರುವಂತೆ ಮನೆಗಳನ್ನು ನಿರ್ಮಿಸಿಕೊಳ್ಳಬೇಕು. ಗ್ರಾಮದಲ್ಲಿ ಅವಶ್ಯಕತೆ ಇದ್ದಲ್ಲಿ ಹೆಚ್ಚಿನ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆದುಕೊಂಡು ಕಾಮಗಾರಿ ಅನುಷ್ಠಾನ ಮಾಡಬೇಕು ಎಂದು ಹೇಳಿದರು.

ನಂತರ ನರೇಗಾ ಕೂಲಿ ಕೆಲಸಕ್ಕೆ ಬರುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಿ ನಮೂನೆ 6ನ್ನು ವಿತರಣೆ ಮಾಡಿದರು. ಇದಾದ ನಂತರ ಗ್ರಾಮದ ಸರಕಾರಿ ಪ್ರಾಥ–ಮಿಕ ಶಾಲೆಗೆ ಭೇಟಿ ನೀಡಿ ಮಕ್ಕಳ ಜೊತೆ ಪಠ್ಯ ವಿಷಯಗಳ ಕುರಿತು ಚರ್ಚೆ ನಡೆಸಿದರು. ಶಾಲೆಯಲ್ಲಿರುವ ಸೌಲಭ್ಯಗಳ ಕುರಿತು, ಕುಡಿಯುವ ನೀರು, ಶೌಚಾಲಯ, ಬಿಸಿಯೂಟದ ಕುರಿತು ಹೀಗೆ ವಿವಿಧ ವಿಷಯಗಳ ಕುರಿತು ಮಕ್ಕಳೊಂದಿಗೆ ಚರ್ಚೆ ನಡೆಸಿದರು.

ನಂತರ ಸಿಂದಗಿ ತಾಲೂಕು ಪಂಚಾಯತಿ ಸಭಾಭವನದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿಗಳಾದ ನಿಂಗಪ್ಪ ಗೋಠೆ, ಸಿಂದಗಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಮು ಜಿ ಅಗ್ನಿ, ಸಹಾಯಕ ನಿರ್ದೇಶಕರಾದ ನಿತ್ಯಾನಂದ ಯಲಗೋಡ, ಪಿಆರ್‌ಇಡಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಎಮ್.ಎಸ್. ಮುರಾಳ, ಸಿಡಿಪಿಒ ಶಂಭುಲಿಂಗ ಹಿರೇಮಠ, ಬಿಇಓ ಆರಿಫ್ ಬಿರಾದಾರ, ಕೃಷಿ ಸಹಾಯಕ ನಿರ್ದೇಶಕ ಎಚ್.ವಾಯ್. ಸಿಂಗೇಗೋಳ, ತೋಟಗಾರಿಕೆ ಸಹಾಯಕ ನಿರ್ದೇಶಕ ರಾಘವೇಂದ್ರ ಬಗಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಪುರಸಭೆ ಉಪ ಚುನಾವಣೆ: ಕಾಂಗ್ರೆಸ್ ನಿಂದ ಒಮ್ಮತದ ಅಭ್ಯರ್ಥಿ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಇಲ್ಲಿನ ಪುರಸಭೆಯ 18ನೇ ವಾರ್ಡಿನ ಉಪ ಚುನಾವಣೆಯ ನಿಮಿತ್ಯ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುರು ತಾರನಾಳ ನೇತೃತ್ವದಲ್ಲಿ ವಾರ್ಡ್ ನ ಮಾಬುಸ್ಮಾಮಿ ಕಟ್ಟೆಯ ಆವರಣದಲ್ಲಿ ಬುಧವಾರ ಬೆಳಿಗ್ಗೆ ಕಾಂಗ್ರೆಸ್ ಪಕ್ಷದ ಪೂರ್ವಭಾವಿ ಸಭೆ ಜರುಗಿತು.



ಈ ವೇಳೆ ಮುಖಂಡರಾದ ಶಿವಾನಂದ ಹಿರೇಮಠ, ಮಹೆಬೂಬ ನಾಲತವಾಡ, ಕಾಮರಾಜ ಬಿರಾದಾರ ಸೇರಿದಂತೆ ಹಲವರು ಮಾತನಾಡಿ ವಾರ್ಡ್ ನ ಸರ್ವತೋಮುಖ ಬೆಳವಣಿಗೆಗೆ ಪಕ್ಷದ ಎಲ್ಲರೂ ಶ್ರಮಿಸಬೇಕು. ಸದ್ಯ ನಮ್ಮ ನಮ್ಮಲ್ಲೇ ಟಿಕೇಟ್ ಗಾಗಿ ಪೈಪೋಟಿ ಮಾಡೋದು ಬೇಡ. ಎಲ್ಲ ಸದಸ್ಯರು ಚರ್ಚಿಸಿ ಸೂಕ್ತ ಒಬ್ಬ ಅಭ್ಯರ್ಥಿಯನ್ನ ಆಯ್ಕೆ ಮಾಡೋಣ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುರು ತಾರನಾಳ ಮಾತನಾಡಿ ವಾರ್ಡ್ ನ ಪಕ್ಷದ ಎಲ್ಲ ಕಾರ್ಯಕರ್ತರು ಚರ್ಚಿಸಿ ಒಮ್ಮತದಿಂದ ಒಬ್ಬರ ಹೆಸರನ್ನು ಸೂಚಿಸಿ. ಸೂಚಿಸಿದ ಹೆಸರನ್ನ ಹೈಕಮಾಂಡ್ ಗೆ ಒಪ್ಪಿಸಿ ಟಿಕೇಟ್ ನೀಡುವುದಾಗಿ ತಿಳಿಸಿದರು.

ಈ ವೇಳೆ ಮಾಜಿ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗಪೂರ ಮಕಾನದಾರ, ಪಕ್ಷದ ಹಿರಿಯರಾದ ಎಂ.ಬಿ.ನಾವದಗಿ, ಪುರಸಭೆ ಸದಸ್ಯ ಮಹೆಬೂಬ ಗೊಳಸಂಗಿ, ಮಾಜಿ ಸದಸ್ಯ ಪಿಂಟು ಸಾಲಿಮನಿ, ಅಪ್ಪು ದೇಗಿನಾಳ, ಗೋಪಿ ಮಡಿವಾಳರ, ಶ್ರೀಕಾಂತ ಚಲವಾದಿ ಸೇರಿದಂತೆ ಮತ್ತೀತರರು ಭಾಗಿಯಾಗಿದ್ದರು.

## ಕಾವ್ಯರಶ್ಮಿ

–ಪದ್ಮನಾಭ. ಡಿ.
("ನಮ್ಮ ಕಥಾ ಅರಮನೆ" ಬರಹಗಾರರು)



### ನಂದಾದೀಪ

ಮನೆಮನಗಳಾಗಿತ್ತು ಬೆಳಕಿರದ ಬಿಡದಿ
ಒಲವ ನಂದಾದೀಪ ತಂದಳು ಮಡದಿ
ನಗೆಯಮಂದಾರ ಚೆಲ್ಲಿದಳು ಮುದದಿ
ನವಪರ್ವದಾರಂಭ ನನ್ನ ಬಾಳಪುಟದಿ

ನಾ ಹಾಡಿದೆನು ಅವಳಿಗೊಂದು ಕವನ
ಅವಳಾದಳು ನನ್ನಯ ಬಾಳಿಗೆ ಧವನ
ಸವಿದಷ್ಟೂ ಸವೆಯದಿರುವ ಸವಿಗಾನ
ಕನಸುಗಳ ಬೆನ್ನಟ್ಟಿ ನಮ್ಮ ಬಾಳಯಾನ

ಇಬ್ಬರಲೂ ಇಬ್ಬರಿಗೂ ಕಂಡಿಲ್ಲ ಲೋಪ
ಬಾಳಹಣತೆಯಲಿ ಅವಳೊಲವ ದೀಪ
ನಾಕಂಡೆ ಅದರಲಿ ಅವಳದೇ ಪ್ರತಿರೂಪ
ಬಳುವಳಿಯಾಗಿತ್ತಳು ನನ್ನದೇ ಪ್ರತಿರೂಪ

ಹರುಷದ ಬೆಳಕನು.ಪಸರಿಸಿಹುದು ದೀಪ
ಹಗಲಲೂ ಇರುಳಲೂ ಉರಿಯುವ ದೀಪ
ಪ್ರೀತಿ ತೈಲ ಸಹನೆ ಬತ್ತಿ ಹೊಂದಿದ ದೀಪ
ಎಂದಿಗೂ ನಂದದ ಒಲವಿನ ನಂದಾದೀಪ



## ಸಂತೃಪ್ತಿ

## ಭಾವರಶ್ಮಿ



– ನಯನಾ ಹೆಬ್ಬಾರ್.
("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

ಸಾಯೀರಾಮ್ ಆಶ್ರಮದ ಒಂದು ಬದಿಯಲ್ಲಿ ಇದ್ದ ವಿಶಾಲವಾದ ಕೊಠಡಿಯಲ್ಲಿ ಹಾಕಿದ್ದ ಪಲ್ಲಂಗದಲ್ಲಿ ಮಾತಾ ಚೈತನ್ಯಾನಂದ ಮಯೀ ಅವರು ಪವಡಿಸಿದ್ದರು. ಎದುರಿಗೆ ಸಾಯಿ ರಾಮನ ಚೆಂದದ ಮೂರ್ತಿ. ಸುಕ್ಕುಗಟ್ಟಿದ ಮುಖದಲ್ಲೂ ಆ ತಾಯಿಯ ಭಕ್ತಿಗೆ ಶಾಂತತೆಯ ಬಿಂಬ; ಮನದ ತುಂಬ ಪ್ರೀತಿಯ ಪ್ರತಿಬಿಂಬ. ಎಂಭತ್ತೆರಡರ ವೃದ್ಧೆ ಕೇವಲ ದೇವರ ನಾಮವನ್ನೇ ಜಪಿಸುತ್ತಾ, ಸಾಯೀ ರಾಮನನ್ನೇ ಆರಾಧಿಸುತ್ತಾ, ಸನ್ಯಾಸಿನಿಯಾಗಿ ದಿನ ಕಳೆಯುತ್ತಿದ್ದರೂ ಇತ್ತೀಚಿಗೆ ಚಿತ್ತದೊಳಗೆ ಹಿಂದಿನ ನೆನಪುಗಳು ಪದೇ ಪದೇ ಅನುರಣಿಸುತ್ತಿತ್ತು.

'ವೈಶಾಖೀ' ದಿನ ಬೆಳಗಾದರೆ ಮನೆಯಲ್ಲಿ ಅವಳ ಹೆಸರೇ ಮೊದಲ ಕರೆ... ಸುರ ಸುಂದರಿ ಮುದ್ದು ಹುಡುಗಿ... ಬೆನ್ನ ಹಿಂದೆ ಇಳಿಬಿದ್ದ ನಾಗರದ ಜಡೆ ಓಲಾಡಿಸುತ್ತಾ ಓಡಾಡುತ್ತಿದ್ದ ವೈಶಾಖಿ ಅಪ್ಪ ಅಮ್ಮನಿಗೆ ಕೊನೆಯ ಮಗಳು. ಕಲಿಯುವುದರಲ್ಲೂ ಜಾಣೆ. ಹಾಗೆಂದೇ ಅವಳು ಮಾತ್ರ ಆ ಮನೆಯಲ್ಲಿ ಎಂಟನೆಯ ತರಗತಿಗೆ ಕಾಲಿ–ರಿಸಿದವಳು. ಅವಳ ಪ್ರಾಯದ ಅನೇಕ ಹುಡುಗಿಯರನ್ನು ಮದುವೆ ಮಾಡಿ ಗಂಡಂದಿರ ಮನೆಗೆ ಕಳುಹಿಸಿಯಾಗಿ–ತ್ತು. ಶಾಲೆಗೆ ಹೋಗುವಾಗ ಗದ್ದೆಯ ಬದಿಯಲ್ಲಿ ಭತ್ತದ ತೆನೆಗಳ ಜೊತೆಗೆ ಆಟವಾಡುತ್ತಾ, ಪಕ್ಕದ ಸೀಬೆ ಮರದ ಕಾಯಿಯನ್ನು ಕದಿಯುತ್ತಾ, ಕೈಗೆ ಸಿಕ್ಕಿದ ಸುರಗಿ ಪಾರಿಜಾತದ ಹೂಗಳನ್ನು ಮುಡಿಗೇರಿಸಿಕೊಳ್ಳುತ್ತಾ ನಡೆಯುತ್ತಿದ್ದ ಮುದ್ದು ಹುಡುಗಿಯನ್ನು ಮನದಲ್ಲಿ ಆರಾಧಿಸುತ್ತಿದ್ದ ಇಪ್ಪತ್ತೊಂದರ ಹುಡುಗ ಮಧುಕರ. ಊರಿನ ಶಾಲೆ ಒಂದರಲ್ಲಿ ಮೇಷ್ಟರಾಗಿದ್ದ. ಅಂದಿನ ಕಾಲ...ಅಪ್ಪಿತಪ್ಪಿ ಹುಡುಗಿಯರ ಜೊತೆ ಮಾತನಾಡುವುದಿರಲಿ.. ಹುಡುಗಿಯರ ಹತ್ತಿರದಿಂದ ಸುಳಿಯಲು ಅವಕಾಶವಿರಲಿಲ್ಲ. ಆದರೆ ಪ್ರೀತಿಗೆ ಭಾಷೆ ಇದೆಯೇ... ಇಬ್ಬರ ಕಣ್ಣುಗಳು ಇಬ್ಬರ ಹೃದಯಗಳು ಅದಾಗಲೇ ಮಾತನಾಡಿಕೊಂಡಿದ್ದವು. ಒಂದು ದಿನ ಪೈರು ತುಂಬಿದ ಗದ್ದೆಯ ಬದಿಯಲ್ಲಿ ವೈಶಾಖಿ ನಡೆದುಕೊಂಡು ಹೋಗುತ್ತಿದ್ದರೆ ಅಲ್ಲಿ ದುತ್ತನೆ ಪ್ರತ್ಯಕ್ಷನಾಗಿದ್ದ ಮಧುಕರ. ವೈಶಾಖಿಗೋ ಮನದಲ್ಲಿ ಹೇಳಲಾರದ ಭಾವ..

ಭಯ.

ಎದುರಿದ್ದ ಮಧುಕರ ಅವಳಿಗೆ ಮಾತ್ರ ಕೇಳುವಂತ ಉಸುರಿದ "ನೀನೆಂದರೆ ತುಂಬಾ ಇಷ್ಟ... ಅಪ್ಪನಲ್ಲಿ ನಿನ್ನನ್ನು ಕೇಳಲು ಹೇಳಿರುವೆ... ಒಲ್ಲೆನೆನ್ನದಿರು... ಬದುಕಿನುದ್ದಕ್ಕೂ ನಿನ್ನನ್ನು ತುಂಬಾ ಚೆನ್ನಾಗಿ ಪ್ರೀತಿಯಿಂದ ನೋಡಿಕೊಳ್ಳುವೆ" ಎಂದವನೇ ಅಲ್ಲಿಂದ ಮರೆಯಾದ. ಅರೆಕ್ಷಣ ಗರಬಡಿದಂತವಳಾದಳು ಹದಿಮೂರರ ಬಾಲೆ. ಆದರೂ ಸಾವರಿಸಿಕೊಂಡು ಮನೆಗೆ ಸಾಗಿದ ವೈಶಾಖಿಯ ಮನದಲ್ಲಿ ಅವನದೇ ಬಿಂಬ.



ನಸುನಗುತ್ತಾ ಮನೆಗೆ ತೆರಳಿದವಳಿಗೆ ಕಂಡದ್ದು ಅಪ್ಪನ ರೌದ್ರಾವತಾರ. ಅವರ ಮಾತುಕತೆಯನ್ನು ನೋಡಿದ್ದ ಯಾರೋ ಊರಿನವರು ಅವಳ ತಂದೆಗೆ ಸುದ್ದಿ ಮುಟ್ಟಿಸಿದ್ದರು. ವಿಷಯ ತಿಳಿದು ಕೆಂಡಾಮಲವಾಗಿದ್ದ ಅವಳಪ್ಪ ಮುಖಮೂತಿ ನೋಡದೆ ಅವಳಿಗೆ ಬಾರಿಸಿದ್ದರು. ನಮ್ಮದೇ ಜಾತಿಯಾಗಿದ್ದರೂ ನಮ್ಮಕಿಂತ ಕೆಳ ಪಂಗಡದ ಹುಡುಗನಿಗೆ ನಾನು ಹೆಣ್ಣು ಕೊಡಬೇಕೇ ... ಇಲ್ಲಿ ಅವನ ಅಪ್ಪ ಬಂದು ಕೇಳೋದೇನು... ಅಲ್ಲಿ ನೋಡಿದರೆ ನಿಮ್ಮ ಮಾತೇನು.. ಎಷ್ಟು ದಿನದಿಂದ ನಡೆಯುತ್ತಿದೆ ನಿನ್ನ ಈ ನಾಟಕ... ತುಂಬಾ ಬೆಳೆದು ಬಿಟ್ಟೆ" ಅಂತೆಲ್ಲಾ ಬೈದು ಬಾರಿಸಿ ದೂರದ



ಊರಿನ ಶ್ರೀಮಂತ ಹುಡುಗನೊಬ್ಬನಿಗೆ ಮೂರನೆಯ ಮದುವೆಗೆ ಮದುವೆ ಮಾಡಿಸಿ ಕಳಿಸಿದ್ದರು.

ಪಾಪದ ಹುಡುಗಿ ಯಾವ ವಿರೋಧವೂ ಇಲ್ಲದೆ ಮದುವೆಯಾದಳು. ಕ್ರಮೇಣ ಮನೆಯವರ ಮನಸ್ಸು ಅರ್ಥವಾಗುತ್ತಾ ಹೋಯಿತು ಆಕೆಗೆ. ಅವನ ಮನೆಯಲ್ಲಿ ಅವನ ಅಮ್ಮನದೇ ಕಾರುಬಾರು. ಗಾಣದೆತ್ತಿನಂತೆ ದುಡಿಸುತ್ತಿದ್ದರು ಆಕೆಯನ್ನು. ಒಂದಿಷ್ಟು ನಲುಗದೆ ಬೆಳೆದ ಹುಡುಗಿ ತೋಟಗದ್ದೆ ಅಡುಗೆ ಕೆಲಸ ಎಲ್ಲವನ್ನು ಮಾಡಬೇಕಿತ್ತು. ಅತ್ತೆಯ ಬಾಯಿಗೆ ಹೆದರಿ ತನ್ನತನವನ್ನೇ ಕಳೆದುಕೊಂಡು ಅಪ್ಪ ಅಮ್ಮನ ಕುಟುಂಬದ ಗೌರವವನ್ನು ಉಳಿಸಲು ಜೀತದಾಳಾಗಿ ದುಡಿಯುತ್ತಿದ್ದಳು. ಅವರ ಸಿಟ್ಟನ್ನು ಸಹಿಸಿಕೊಳ್ಳುತ್ತಿದ್ದಳು.

ಕ್ರಮೇಣ ಅತ್ತೆಯ ರಾಕ್ಷಸೀತನದ ಪರಿಚಯವಾಗ ತೊಡಗಿತ್ತು ಆಕೆಗೆ. ಅಮ್ಮನ ಆಜ್ಞಾಧಾರಕ ಮಗ... ಒಂದಷ್ಟು ಸ್ವಂತ ಬುದ್ಧಿ ಇಲ್ಲದ ಜೀವಿ. ಅಮ್ಮ ಭೋಗಿಸು ಎಂದರೆ ಭೋಗ, ಪೀಡಿಸು ಎಂದರೆ ಪೀಡನೆ, ಬಡಿ ಎಂದರೆ ಮಂಚಕ್ಕೆ ಕಟ್ಟಿ ಹಾಕಿ ಬಡಿತ. ಆದರೂ ಎಲ್ಲವನ್ನೂ ಸಹಿಸಿಕೊಂಡು ಅವರಿಗಾಗಿ ದುಡಿಯುತ್ತಿದ್ದಳು. ಯಾರಿಂದಲೋ ಮಧುಕರನಿಗೆ ಬೇರೆ ಮದುವೆಯಾದ ವಿಚಾರ ತಿಳಿದಾಗ ಮಾತ್ರ ಮನದಣಿಯೆ ಅತ್ತಿದ್ದಳು. ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವೆ ಎನ್ನುವ ಮಾತು ಮತ್ತೆ ಮತ್ತೆ ನೆನಪಾಗುತ್ತಿತ್ತು. ಗಂಡನ ಪ್ರತಿ ಹೊಡೆತದಲ್ಲಿಯೂ ಮಧುಕರ ತನ್ನ ಪತ್ನಿಯನ್ನು ಪ್ರೀತಿಸುತ್ತಿರಬಹುದಾದ ರೀತಿಯನ್ನು ನೆನೆನೆನೆದು ದುಃಖಿಸುತ್ತಿದ್ದಳು. ಆದರೂ ತವರು ಮನೆಯ ಹೆಸರಿಗೆ ಕುಂದು ಬಾರದಂತೆ ನಡೆದುಕೊಳ್ಳುತ್ತಿದ್ದಳು. ಆದರೆ ಕೆಲವು ವರ್ಷಗಳು ಕಳೆದಂತೆ ತನ್ನ ಗಂಡನ ಮೊದಲ ಇಬ್ಬರು ಪತ್ನಿಯರನ್ನು ಅತ್ತೆಯೇ ಕೊಲ್ಲಿಸಿದ ಕುರಿತು ಗುಸು ಗುಸು ಮಾತುಗಳು ಹೇಳಲಾರಂಬಿಸಿದ್ದವು. ಆದರೂ ಅವಳು ಕಂಗೆಡಲಿಲ್ಲ. ಯಾವಾಗ ಅದು ಯಾರೋ ಊರಿನ ಕೆಲವು ಪುರುಷರನ್ನು ಇವಳೆದುರು ತಂದು ನಿಲ್ಲಿಸಿದಳೋ ಆಗ ರಣಚಂಡಿಯಂತಾದಳು. ಮಗನಿಗೆ ಮದುವೆ ಮಾಡಿಸುವ ಕಾರಣಗಳು ತಿಳಿದು ಹೋದವು. ಸಹಿಸಲಾರದೆ ಅಪ್ಪ ಅಮ್ಮನ ಬಾಗಿಲಿಗೆ ಬಂದವಳಿಗೆ ಮದುವೆಗೆ ಮೊದಲೇ ಊರು ತುಂಬಾ ಹೇಳಿಸಿದವಳು ನೀನು ಎಂಬ ತಾತ್ಸಾರದ ಮಾತುಗಳು ಮಾತ್ರ ದೊರೆಯಿತು.

ಸಮಾಜ, ಹೆತ್ತವರು ಯಾರು ತನ್ನ ಜೊತೆಗಿಲ್ಲ ಎಂದು ತಿಳಿದವಳ ಮನಸ್ಸು ತನಗಾಗಿ ತಾನು ಬದುಕಬೇಕೆಂಬುದರ ಬಗ್ಗೆ ಚಿಂತಿಸಲು ಆರಂಭಿಸಿತು. ಕಷ್ಟಗಳ ಕುಲುಮೆಯಲ್ಲಿ ಬೆಂದ ಮನಸ್ಸಿಗೆ ತನಗೆ ಸರಿಹೊಂದುವ ಬದುಕನ್ನು ತಾನು ಆರಿಸಿಕೊಳ್ಳಬೇಕು ಎಂಬುದರ ಯೋಚನೆ. ತನ್ನನ್ನು ಹಾದರಕ್ಕೆ ಇಳಿಸಲು ಕಾರಣವಾದ ತನ್ನ ತನುವಿನ ಸೌಂದರ್ಯದ ಬಗ್ಗೆ ತುಚ್ಛ ಭಾವ. ಮುಂದೆ ತನಗಿಷ್ಟ ಬಂದಂತೆ ಶಾಂತವಾದ ಬದುಕನ್ನು ನಡೆಸಲು ಆಧ್ಯಾತ್ಮ ಮತ್ತು ಸನ್ಯಾಸ ಬೇಕೆನಿಸಿತು. ಗುರುಗಳೊಬ್ಬರನ್ನು ಹುಡುಕಿಕೊಂಡು ಅವರ ಜೊತೆಗೆ ಸನ್ಯಾಸ ದೀಕ್ಷೆ ಪಡೆಯಲು ಕಾಶಿಗೆ ತೆರಳಿದಳು. ಸೌಂದರ್ಯದ ಕುರುಹೇ ಇರಬಾರದು ಸೊಂಟದಿಂದ ಇಳಿಬಿದ್ದಿದ್ದ ನಾಗರ ಜಡೆಯನ್ನು ಸಂಪೂರ್ಣವಾಗಿ ಬೋಳಿಸಿಕೊಂಡಳು. ಕಾವಿಯ ನಿಲುವಂಗಿಯನ್ನು ಧರಿಸಿದಳು. ಭಗವಂತನ ಸಾನಿಧ್ಯದಲ್ಲಿ ಆತನನ್ನೇ ಧ್ಯಾನಿಸಿ ಭಜಿಸಿ ಸಂಪೂರ್ಣವಾದ ನೆಮ್ಮದಿಯನ್ನು ಕಂಡುಕೊಂಡಳು. ಬೇರೊಂದು ಊರಿನಲ್ಲಿದ್ದ ಸಾಯಿ ಮಂದಿರದಲ್ಲಿ ವೈಶಾಖಿ ಎಲ್ಲರಿಗೂ ಚೈತನ್ಯ ನೀಡುವ ಮಾತೆಯಾಗಿ ಚೈತನ್ಯಾನಂದಮಯಿ ಎನಿಸಿಕೊಂಡಳು.

ಗತವನ್ನೆಲ್ಲ ನೆನಪಿಸಿಕೊಂಡ ಆಕೆಯ ಮುಖದಲ್ಲಿ ಆರದ ಮಂದಹಾಸ, ಮನಸ್ಸಿನಲ್ಲಿ ಅನನ್ಯ ಶರಣಾಗತಿಯ ಭಾವ, ತಾನು ಆರಿಸಿಕೊಂಡ ನೋವಿಲ್ಲದ ಬದುಕು... ಅದೇ ಸಂತೃಪ್ತಿ ಯ ಕಡಲು.